ಮಾರ್ಚ್ ೨೦೨೬

# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ

## ಆರ್ಬಿಟ್ ಸಮಾಜ ಸೇವಾ ಸಂಸ್ಥೆ ,ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ





ಡಾ॥ ರಾಬರ್ಟ್ ಮೈಕಲ್ ಮಿರಾಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ಫಾದರ್॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

### "ಆರ್ಬಿಟ್ ಸಂಸ್ಥೆ ಹುಮನಾಬಾದ ಹಾಗೂ ಇಂಡಿಯನ್ ಕ್ಯಾನ್ಸರ್ ಸುಸೈಟಿ ಗುಲ್ಬರ್ಗ, ವೆಲ್ಮೆಗ್ನ ಸೈಲೆನ್ಸ್ ಆಸ್ಪತ್ರೆ ಇವರ ಸಾಯೋಗದಲ್ಲಿ ಕನಕಟ್ಟ ಗ್ರಾಮ ಪಂಚಾಯತ ಆವರಣದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರ"









ದಿನಾಂಕ 27 ಫೆಬ್ರುವರಿ 2026ರಂದು ಹುಮನಾಬಾದ ತಾಲೂಕಿನ ಕನಕಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯತ ಆವರಣದಲ್ಲಿ ಆರ್ಬಿಟ್ ಸೇವಾ ಸಂಸ್ಥೆ ಹುಮನಾಬಾದ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ಸೈಲೆನ್ಸ್ ಕಣ್ಣಿನ ಆಸ್ಪತ್ರೆ ಹುಮನಾಬಾದ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಆರ್ಬಿಟ್ ಸೇವಾ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೊಹಾನ್ ವಾಲಿ ಅವರು ಆರ್ಬಿಟ್ ಸಂಸ್ಥೆ ಸುಮಾರ 33 ವರ್ಷಗಳಿಂದ ಸಮಾಜದ ಜನರಿಗೆ ಬಡವರಿಗೆ ಅಂಚೆಯಿಂದ ತಳ್ಳಲ್ಪಟ್ಟವರಿಗೆ ಅನಾರೋಗ್ಯದಲ್ಲಿರುವವರನ್ನು ಇತರೆ ವರ್ಗದವರನ್ನು ಪುನರ್ವಸತಿಯನ್ನು ಕಲ್ಪಿಸಿಕೊಡುವುದರಲ್ಲಿ ಸೇವೆಯನ್ನು ಮಾಡುತ್ತಾ ಬರುತಿದೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ಅನ್ನುವ ರೋಗದಿಂದ ಬಳಲುತ್ತಿರುವ ಜನರನ್ನು ನಾವು ಸಮಾಜದಲ್ಲಿ ನೋಡುತ್ತಿದ್ದೇವೆ. ಅದಕ್ಕಾಗಿಯೇ ಆರ್ಬಿಟ್ ಸಂಸ್ಥೆಯ ವತಿಯಿಂದ ಕನಕಟ್ಟ ಗ್ರಾಮದ ಜನರನ್ನು ಈ ಕ್ಯಾನ್ಸರ್ ರೋಗವನ್ನು ಬರದ ಹಾಗೆ ಉಚಿತವಾಗಿ ತಪಾಸಣೆಯನ್ನು ಮಾಡುವುದಕ್ಕಾಗಿ ನಾವು ಈ ಶಿಬಿರವನ್ನು ಮಾಡುತ್ತಿದ್ದೇವೆ. ಎಲ್ಲಾ ಗ್ರಾಮಸ್ಥರು ಈ ತಪಾಸಣೆಯ ಸದುಪಯೋಗವನ್ನು ಪಡೆದುಕೊಳ್ಳಿ ಆರೋಗ್ಯವಂತರಾಜಿ ಜೀವಿಸಿರಿ ಎಂದು ಪ್ರಾಸ್ತಾವಿಕ ನುಡಿಯನ್ನು ನುಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರಭು ಸರ್ ಅವರು ನಮ್ಮ ಕನಕಟ್ಟ ಗ್ರಾಮದ ಜನರಿಗೆ ಒಳ್ಳೆಯ ಆರೋಗ್ಯವನ್ನು ನೀಡುವುದಕ್ಕಾಗಿ ಹುಮನಾಬಾದ ವಲಯದ ಆರ್ಬಿಟ್ ಸಂಸ್ಥೆಯ ಈ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಮಾಡುತ್ತಿದ್ದಾರೆ ತಾವೆಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳಿ ಮತ್ತು ನಮ್ಮ ಕಣ್ಣು ದೇಹವನ್ನು ಕಾಪಾಡುವಂತದಾಗಿದೆ ಕಣ್ಣು ಒಳ್ಳೆಯದಿದ್ದರೆ ನಮ್ಮ ದೇಹವೆಲ್ಲ ಒಳ್ಳೆಯದಾಗುತ್ತದೆ ಅದರಿಂಗ ದೃಷ್ಟಿಕೋನ ಅನ್ನೋದು ಮನುಷ್ಯನಿಗೆ ಅತಿ ಅವಶ್ಯಕವಾಗಿದೆ ಅದಕಾಗಿ ತಾವೆಲ್ಲರೂ ಕಣ್ಣು, ಬಿಪಿ, ಶುಗರ್, ಹಲ್ಲು, ಬಾಯಿ, ಗಂಟಲು, ಎದೆಯ ಭಾಗವನ್ನು ಮತ್ತು ಹೊಟ್ಟೆಯ ಭಾಗವನ್ನು ನಮ್ಮ ದೇಹದ ತಲೆಯಿಂದ ಕಾಳಿನವರೆಗೆ ಎಲ್ಲಾ ಅವಯವಗಳನ್ನು ಉಚಿತವಾಗಿ ತಪಾಸಣೆ ಮಾಡುವುದು ತುಂಬ ಭಾಗ್ಯಕರವಾಗಿದೆ ಎಂದು ತಿಳಿಸಿದರು. ಎಚ್.ಐ.ಓ ಶ್ರೀಮತಿ ಪ್ರತಿಮಾ ಮೇಡಂ ರವರು ನಮ್ಮ ಕನಕಟ್ಟ ಗ್ರಾಮಸ್ಥರಿಗೆ ಒಳ್ಳೆಯ ಅವಕಾಶವನ್ನು ಆರ್ಬಿಟ್ ಸಂಸ್ಥೆಯವರು ಮತ್ತು ಇಂಡಿಯನ್ ಕ್ಯಾನ್ಸರ್ ಸುಸೈಟಿಯವರು ಮಾಡುತ್ತಿದ್ದೀರಿ ನಾವು ಇದರ ಸದುಪಯೋಗವನ್ನು ಮಡೆದುಕೊಳ್ಳುತ್ತೇವೆ ಮತ್ತು ಗ್ರಾಮಸ್ಥ ಜನರಿಗೆ ಇದರ ಅರಿವು ಮೂಡಿಸುತ್ತೇವೆ ಮತ್ತು ಅನೇಕ ಜನರನ್ನು ಈ ಶಿಬಿರದಲ್ಲಿ ಬಂದು ತಪಾಸಣೆ ಮಾಡಿಸಿಕೊಳ್ಳುವದಕೆ ನಮ್ಮ ಆಶಾ ಕಾರ್ಯಕರ್ತೆಯರನ್ನು ತಿಳಿಸುತ್ತೇವೆ ಮತ್ತು ನಮ್ಮ ನೆರವನ್ನು ನಿಮಗೆ ನೀಡುತ್ತೇವೆ ಎಂದು ಹೇಳಿದರು. ಈ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ನೋಡಲ್ ಅಧಿಕಾರಿಗಳಾದ ಗೋವಿಂದ್ ರಾವ್ ಸರ್, ಪ್ರಾಥಮಿಕ ಆರೋಗ್ಯ ಕೇಂದ್ರ ಕನಕಟ್ಟ ಏ.ಎಮ್.ಓ ಸಹಾಯಕ ಆರೋಗ್ಯ ಅಧಿಕಾರಿಗಳಾದ ಸೈಯದ್ ಇಸ್ಮಾಯಿಲ್ ಸರ್, ಆಶಾ ಕಾರ್ಯಕರ್ತೆಯರು, ಆರ್ಬಿಟ್ ಸಂಸ್ಥೆಯ ಇ.ಐ ಮತು ್ತಇಇ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಮಮತಾ ಕಾರ್ಯಕರ್ತೆಯರಾದ ಶ್ರೀಮತಿ ಕವಿತಾ, ಇಂಡಿಯನ್ ಕ್ಯಾನ್ಸರ್ ಸುಸೈಟಿ ಸಿಬ್ಬಂದಿ ವರ್ಗದವರು ಸೈಲೆನ್ಸ್ ಆಸ್ಪತ್ರೆಯ ಸಿಬ್ಬಂದಿಯವರು ಹಾಗೂ ಕನಕಟ್ಟ ಗ್ರಾಮಸ್ಥರು ಭಾಗವಹಿಸಿದರ. ಈ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ 87 ಜನರು ಭಾಗವಹಿಸಿದರು ಅದರಲ್ಲಿ 74 ಜನರಿಗೆ ಕ್ಯಾನ್ಸರ್ ತಪಾಸಣೆಯನ್ನು ಮಾಡಲಾಯಿತು. ಈ ಕಾರ್ಯಕ್ರಮವನ್ನು ಶ್ರೀಮತಿ ಮಹಾದೇವಿ ಅವರು ಪ್ರಾರ್ಥನೆ ಗೀತೆಯನ್ನು ಹಾಡಿದರ, ಶ್ರೀಮತಿ ಕವಿತಾ ನಿರೂಪಣೆ ಮಾಡಿದರು, ಶ್ರೀ ಪ್ರವೀಣ್ ಸರ್ ಸ್ವಾಗತಿಸಿದರು, ಶ್ರೀಮತಿ ಮಮತಾ ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಲಾಯಿತು.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಮಹಾಸಂಗ ರಚನೆ ಕುರಿತು ತರಬೇತಿ ಕಾರ್ಯಗಾರ”




9 ಫೆಬ್ರುವರಿ 2026ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ ಗ್ರಾಮದಲ್ಲಿ, ನಾಲ್ಕು ಸಂಘಗಳ ಸದಸ್ಯರಿಗೆ ಮಹಾಸಂಗ ರಚನೆಯ ಪರಿಕಲ್ಪನೆ ಕುರಿತು ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ಶ್ರೀಮತಿ ಅಮಿತಾ ಅವರು ಮಹಾಸಂಗದ ಕುರಿತು ವಿವರಿಸಿದರು. ಮಹಾಸಂಗ ಎಂದರೆ ಒಂದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳೊಂದಿಗೆ ಸಂಘಗಳು ಮತ್ತು ಸಮುದಾಯದ ಅಭಿವೃದ್ಧಿಗಾಗಿ, ಸಾಮಾಜಿಕ ಪಿಡುಗುಗಳ ವಿರುದ್ಧ ಮಹಿಳೆಯರ ಹಕ್ಕುಗಳ ಮೂಲಕ ಹೋರಾಡುವ ಸಮೂಹವಾಗಿದೆ. ಮಹಾಸಂಗದ ಗುರಿ: ಮಹಿಳಾ ಸ್ವಸಹಾಯ ಸಂಘಗಳು ಮತ್ತು ಸಮುದಾಯದ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದು. ಮಹಾಸಂಗದ ಉದ್ದೇಶಗಳು: ಜಾಲಬಂಧವನ್ನು ಏರ್ಪಡಿಸುವುದು. ಸ್ಥಳೀಯ ಅಭಿವೃದ್ಧಿಯನ್ನು ಉತ್ತೇಜಿಸುವುದು, ಸ್ವಸಹಾಯ ಸಂಘಗಳನ್ನು ಮಾದರಿ ಸಂಘಗಳಾಗಿ ರೂಪಿಸುವುದು, ಸ್ಥಳೀಯ ಆಡಳಿತದಲ್ಲಿ ಭಾಗವಹಿಸಲು ಮಹಿಳೆಯರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರೇರೇಪಿಸುವುದು, ಹಕ್ಕುಗಳಿಗಾಗಿ ಹೋರಾಟಕ್ಕೆ ಆದ್ಯತೆ ನೀಡುವುದು, ಮಹಾಸಂಗದಿಂದಾಗುವ ಪ್ರಯೋಜನಗಳು: ಸ್ವಸಹಾಯ ಸಂಘಗಳಿಗೆ ಪ್ರೇರಣೆ ದೊರೆಯುತ್ತದೆ, ಬಲಹೀನ ಸಂಘಗಳನ್ನು ಬಲಪಡಿಸಲು ಸಹಾಯವಾಗುತ್ತದೆ, ಹೊಸ ಸಂಘಗಳನ್ನು ರಚಿಸಲು ಉತ್ತೇಜನ ನೀಡುತ್ತದೆ, ವಿವಿಧ ಇಲಾಖೆಗಳೊಂದಿಗೆ ಜಾಲಬಂಧ ಬೆಳೆಸಿಕೊಳ್ಳಲು ಅವಕಾಶ ಸಿಗುತ್ತದೆ, ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಲು ಸಂಘಟನೆಯ ಬಲ ದೊರೆಯುತ್ತದೆ. ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ಖಂಡಿಸಿ ನ್ಯಾಯ ದೊರಕಿಸಲು ಸಹಾಯವಾಗುತ್ತದೆ. ಈ ಮೂಲಕ ಅನೇಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

## “ಮಹಾಸಂಗ ಬಲವರ್ಧನೆ ಕುರಿತು ತರಬೇತಿ”




ಹುಮ್ನಾಬಾದ್ ತಾಲೂಕಿನ ಓತಗಿ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ಶ್ರೀಮತಿ ಸವಿತಾ ಅವರು ದಿನಾಂಕ 04 ಫೆಬ್ರುವರಿ 2026ರಂದು ಮೇರಿ ಮಹಾಸಂಗದ ಮಹಿಳೆಯರಿಗೆ ಮಹಾಸಂಗ ಬಲವರ್ಧನೆ ಕುರಿತು ತರಬೇತಿ ನೀಡಿದರು. ಮಹಾಸಂಗವು ಕನಿಷ್ಠ 5 ರಿಂದ 6 ಸಂಘಗಳನ್ನು ಒಳಗೊಂಡು, ಒಂದೇ ಗುರಿ ಮತ್ತು ಉದ್ದೇಶದೊಂದಿಗೆ ಸಮುದಾಯದ ಸಣ್ಣಪುಟ್ಟ ಸಮಸ್ಯೆಗಳು ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತುವ ಸಂಘಟನೆಯಾಗಿ ಬೆಳೆಯಬೇಕು ಎಂದು ತಿಳಿಸಿದರು. ಮಹಾಸಂಗದ ಪ್ರಮುಖ ಕಾರ್ಯಗಳು: ಸದಸ್ಯರು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು, ಪ್ರತಿ ತಿಂಗಳು ಕಡ್ಡಾಯವಾಗಿ ಸಭೆ ನಡೆಸಬೇಕು, ಸ್ವಸಹಾಯ ಸಂಘಗಳ ಪ್ರಗತಿಯನ್ನು ಪರಿಶೀಲಿಸಬೇಕು, ಸಂಘಗಳಲ್ಲಿರುವ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು, ಮಹಿಳೆಯರು ಮತ್ತು ಮಕ್ಕಳ ಮೇಲಿನ ಶೋಷಣೆಯ ವಿರುದ್ಧ ಕಾರ್ಯಾಚರಣೆ ನಡೆಸಬೇಕು, ಮಹಾಸಂಗದ ದಾಖಲೆಗಳನ್ನು ಕ್ರಮಬದ್ಧವಾಗಿ ಸಂರಕ್ಷಿಸಬೇಕು, ಸಮುದಾಯಕ್ಕೆ ಮಾದರಿಯಾದ ಮಹಾಸಂಗವಾಗಬೇಕು. ಈ ತರಬೇತಿಯಲ್ಲಿ 25 ಸದಸ್ಯರು ಭಾಗವಹಿಸಿ ಮಹಾಸಂಗ ಬಲವರ್ಧನೆಯ ಪ್ರಯೋಜನಗಳ ಕುರಿತು ಮಾಹಿತಿ ಪಡೆದರು.

## “ಉಚಿತ ಕಾನೂನು ಸೇವೆಗಳ ಕುರಿತು ತರಬೇತಿ”



ದಿನಾಂಕ 20 ಫೆಬ್ರವರಿ 2026ರಂದು ಬಾಲ್ಕಿ ತಾಲೂಕಿನ ಜೋಳದಪ್ಪಗಾ ಗ್ರಾಮದಲ್ಲಿ ಕಾವೇರಿ ಮತ್ತು ಭಾಗ್ಯಶ್ರೀ ಸ್ವಸಹಾಯ ಸಂಘದ ಸದಸ್ಯರಿಗೆ ಉಚಿತ ಕಾನೂನು ಸೇವೆಗಳ ಕುರಿತು ತರಬೇತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಯೋಜಕರಾದ ಸಿಸ್ಟರ್ ಶೀಲಾ ಜೆನಿಫರ್ ಮತ್ತು ಕಾರ್ಯಕರ್ತರಾದ ಶ್ರೀ ಪ್ರಭು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ಸಭೆಯಲ್ಲಿ ಶ್ರೀಮತಿ ಸಂಗೀತಾ ಪ್ರಾರ್ಥನೆ ಮಾಡಿದರು, ಮರಿಯಾಳಮ್ಮ ಸ್ವಾಗತಿಸಿದರು. ಶ್ರೀ ಪ್ರಭು ಅವರು ಕಾನೂನು ಸೇವೆಗಳ ಕುರಿತು ವಿವರಿಸುತ್ತಾ, ಕಾನೂನು ಎಂದರೆ ವ್ಯಕ್ತಿಯ ಮೇಲೆ ಆಗುವ ದಬ್ಬಾಳಿಕೆಯನ್ನು ತಡೆಗಟ್ಟುವ ವ್ಯವಸ್ಥೆ ಎಂದು ತಿಳಿಸಿದರು. ಬಡವರು, ಮಹಿಳೆಯರು ಮತ್ತು ಹಿಂದುಳಿದ ವರ್ಗದವರು ತಮ್ಮ ಸಮಸ್ಯೆಗಳಿಗೆ ತಾಲೂಕು ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮೂಲಕ ಉಚಿತವಾಗಿ ವಕೀಲರ ಸಹಾಯ ಪಡೆದು ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದರು. ಈ ತರಬೇತಿಯಲ್ಲಿ 14 ಸದಸ್ಯರು ಭಾಗವಹಿಸಿದರು ಮತ್ತು ಸಭೆ ಮಧ್ಯಾಹ್ನ 2 ಗಂಟೆಗೆ ಮುಕ್ತಾಯವಾಯಿತು.

## “ಹಕ್ಕೊತ್ತಾಯ ಜಾಲಬಂಧ ತರಬೇತಿ”




ದಿನಾಂಕ 17 ಫೆಬ್ರವರಿ 2026ರಂದು ಬಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿ, ಪ್ರೇಮ ಜ್ಯೋತಿ ಮಹಾಸಂಗದ ಸಭೆಯಲ್ಲಿ ಹಕ್ಕೊತ್ತಾಯ ಜಾಲಬಂಧ ತರಬೇತಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಿರ್ಮಲಾ ಮತ್ತು ಕಾರ್ಯಕರ್ತರಾದ ಶ್ರೀ ಪ್ರಭು ಭಾಗವಹಿಸಿದರು. ಹಕ್ಕು ತಾಯಿ ಜಾಲಬಂಧ ಎಂದರೆ ಗ್ರಾಮದಲ್ಲಿರುವ ಸರ್ಕಾರಿ ಅಧಿಕಾರಿಗಳೊಂದಿಗೆ ಉತ್ತಮ ಸಂಬಂಧ ಬೆಳೆಸಿ ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆದುಕೊಳ್ಳುವುದು. ಉದಾಹರಣೆಗೆ: ಚರಂಡಿ ವ್ಯವಸ್ಥೆ, ಬೀದಿ ದೀಪಗಳು, ರಸ್ತೆ ವ್ಯವಸ್ಥೆ, ಪರಿಸರ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ. ಈ ಎಲ್ಲ ಸೌಲಭ್ಯಗಳನ್ನು ಗ್ರಾಮ ಪಂಚಾಯಿತಿಯ ಮೂಲಕ ಪಡೆಯಬಹುದು ಎಂದು ತಿಳಿಸಿದರು. ಈ ತರಬೇತಿಯಲ್ಲಿ 16 ಸದಸ್ಯರು ಭಾಗವಹಿಸಿದರು ಮತ್ತು ಸಭೆ ಮಧ್ಯಾಹ್ನ 2 ಗಂಟೆಗೆ ಮುಕ್ತಾಯವಾಯಿತು.

## “ತಾಲೂಕು ಒಕ್ಕೂಟದ ಸಭೆ”



21 ಫೆಬ್ರವರಿ 2026 ರಂದು, ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನಲ್ಲಿ ಜನಶಕ್ತಿ ತಾಲೂಕು ಒಕ್ಕೂಟದ ಸಭೆ ನಡೆಯಿತು. ಸಭೆಯಲ್ಲಿ ಆರು ಮಹಾಸಂಗದ ಸದಸ್ಯರು ತಮ್ಮ ಮಹಾಸಂಗ ಸಭೆಗಳಲ್ಲಿ ಚರ್ಚಿಸಿದ ವಿಷಯಗಳನ್ನು ಹಂಚಿಕೊಂಡರು. ನಂತರ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲಾ ಅವರು ಮಹಿಳಾ ದಿನಾಚರಣೆ ಕುರಿತು ಮಾತನಾಡಿ, ಸಂಪನ್ಮೂಲ ಸಂಗ್ರಹಣೆ ಮತ್ತು ಅತಿಥಿಗಳನ್ನು ಆಹ್ವಾನಿಸುವ ಜವಾಬ್ದಾರಿಯನ್ನು ತಾಲೂಕು ಮತ್ತು ಜಿಲ್ಲಾ ಒಕ್ಕೂಟದವರು ವಹಿಸಿಕೊಳ್ಳಬೇಕೆಂದು ತಿಳಿಸಿದರು. ಸಭೆಯಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವುದರ ಮೂಲಕ ಭ್ರಾತೃತ್ವ ಭಾವನೆ ಮೂಡಿಸಲಾಯಿತು. ಕಿರಣ ಮಹಾಸಂಗದವರು ಸ್ವಾಗತಿಸಿದರು, ತಾವರೆ ಮಹಾಸಂಗದವರು ಪ್ರಾರ್ಥಿಸಿದರು, ಕಮಲ ಮಹಾಸಂಗದವರು ವಂದನಾರ್ಪಣೆ ಮಾಡಿದರು.

## “ಆರ್ಥಿಕ ಸಂಕಷ್ಟದ ನಡುವಿನಲ್ಲಿ ಆರ್ಬಿಟ್ ಸಂಸ್ಥೆಯ ಸಮೃದ್ಧಿ ಯೋಜನೆಯಿಂದ ಸಹಾಯಧನ ಹಾಗೂ ಸ್ವ-ಉದ್ಯೋಗ”



ಯಶೋಗಾಥೆ – ಶ್ರೀಮತಿ ಗೌಸಿಯ, ಹೆಸರು: ಶ್ರೀಮತಿ ಗೌಸಿಯ, ಗಂಡನ ಹೆಸರು: ಖಾಜಾ, ವಿಳಾಸ: ಚಿಟಗುಪ್ಪ, ಬೀದರ್ ಜಿಲ್ಲೆ, ಸಂಘದ ಹೆಸರು: ಮಹೇಕ್. ಶ್ರೀಮತಿ ಗೌಸಿಯ ಮತ್ತು ಅವರ ಗಂಡ ಖಾಜಾ ಕೂಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದಾರೆ. ಇವರಿಗೆ ನಾಲ್ಕು ಮಕ್ಕಳು ಇದ್ದು, ಮೂರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗ. ನಾಲ್ವರೂ ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾರೆ. ಇವರಿಗೆ ಒಂದು ಮನೆ ಇದ್ದು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಆರ್ಥಿಕ ಸಂಕಷ್ಟದ ನಡುವಿನಲ್ಲಿ ಆರ್ಬಿಟ್ ಸಂಸ್ಥೆಯಿಂದ ಮಹೇಕ್ ಸಂಘ ರಚನೆಯಾದಾಗ ಅವರು ಸದಸ್ಯತ್ವ ಪಡೆದುಕೊಂಡರು. ನಂತರ ಹಲವು ತರಬೇತಿಗಳಲ್ಲಿ ಭಾಗವಹಿಸಿ ಸಮೃದ್ಧಿ ಯೋಜನೆಯಿಂದ ₹30,000 ಸಾಲ ಪಡೆದು ಎಮ್ಮೆ ಖರೀದಿಸಿದರು. ಎಮ್ಮೆ ಕರುವನ್ನು ಹಾಕಿದ ನಂತರ ದಿನಕ್ಕೆ 3–4 ಲೀಟರ್ ಹಾಲು ಮಾರಾಟ ಮಾಡಿ ₹300–₹400 ಆದಾಯ ಗಳಿಸುತ್ತಿದ್ದಾರೆ. ಇದರಿಂದ ಮನೆಯ ಖರ್ಚು ಮತ್ತು ಮಕ್ಕಳ ಶಿಕ್ಷಣಕ್ಕೆ ಸಹಾಯವಾಗುತ್ತಿದೆ ಎಂದು ಅವರು ಹೇಳಿದರು. ಆರ್ಬಿಟ್ ಸಂಸ್ಥೆ ಸಂಘ ರಚನೆ, ತರಬೇತಿ ಹಾಗೂ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಪಡೆಯಲು ಸಹಾಯ ಮಾಡಿದೆ ಎಂದು ಅವರು ಅಭಿಪ್ರಾಯಪಟ್ಟರು. ಕೊನೆಯಲ್ಲಿ ಅವರು ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸಿದರು.



ಯಶೋಗಾಥೆ – ಶ್ರೀಮತಿ ಜಯಶ್ರೀ. ಹೆಸರು: ಜಯಶ್ರೀ, ಗಂಡನ ಹೆಸರು: ಸಂಜು ಕುಮಾರ್, ಹಳ್ಳಿ: ಭಾತಂಬ್ರಾ, ಸಂಘದ ಹೆಸರು: ದಯಾಸಾಗರ್. ಶ್ರೀಮತಿ ಜಯಶ್ರೀ ಮತ್ತು ಅವರ ಗಂಡ ಸಂಜು ಕುಮಾರ್ ತುಂಬಾ ಬಡ ಕುಟುಂಬಕ್ಕೆ ಸೇರಿದ್ದು, ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು ಇದ್ದು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಅವರು ದಯಾಸಾಗರ್ ಸಂಘದಲ್ಲಿ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದರು. ಸಮೃದ್ಧಿ ಯೋಜನೆಯಿಂದ ಎರಡು ಬಾರಿ ಸಾಲ ಪಡೆದು 1% ಬಡ್ಡಿದರದಲ್ಲಿ ಮರುಪಾವತಿ ಮಾಡಿದರು. ಸಂಸ್ಥೆಯ ವತಿಯಿಂದ ₹15,000 ಸಹಾಯಧನ ನೀಡಲಾಗಿದ್ದು, ತಮ್ಮದೇ ಹಣ ₹15,000 ಸೇರಿಸಿ ಒಂದು ಚಿಕ್ಕ ಕಿರಾಣಿ ಅಂಗಡಿ ಆರಂಭಿಸಿದರು. ಈ ಅಂಗಡಿಯಿಂದ ದಿನಕ್ಕೆ ₹300–₹400 ಆದಾಯ ಬರುತ್ತಿದ್ದು, ಮನೆಯಲ್ಲೇ ಕೂತು ಉದ್ಯೋಗ ನಡೆಸುತ್ತಿರುವುದಕ್ಕೆ ಅವರು ಸಂತೋಷ ವ್ಯಕ್ತಪಡಿಸಿದರು. ಅವರು ಸ್ವ ಉದ್ಯೋಗ ತರಬೇತಿಯಿಂದ ಪ್ರೇರಣೆ ಪಡೆದು ಉದ್ಯಮ ಆರಂಭಿಸಿದ್ದಾಗಿ ಹೇಳಿ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ತಿಳಿಸಿದ್ದಾರೆ.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳ ಪೋಷಕರ ಸಭೆ”



14 ಫೆಬ್ರವರಿ 2026ರಂದು ಹುಮನಾಬಾದ್ ತಾಲೂಕಿನ ಘಾಟಬೋರಾಳ ಗ್ರಾಮದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ವಿಶೇಷವಾಗಿರುವಂತ ಮಾಹಿತಿಯನ್ನು ಪೋಷಕರಿಗೆ ಸಭೆಯಲ್ಲಿ ತಿಳಿಸಿದರು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಮನೆಯಲ್ಲಿ ವಿಶೇಷವಾಗಿರುವಂತ ಗಮನವನ್ನು ಹರಿಸಬೇಕು. ಅವರ ಬಯಕೆ ಬೇಡಿಕೆಗಳು ಸೂಕ್ಷ್ಮವಾಗಿ ಅವಲೋಕಿಸಬೇಕು. ಅವರ ದಿನ ನಿತ್ಯದ ಆಹಾರ ಸ್ವಚ್ಛತೆ ಕುರಿತು ಮಕ್ಕಳಿಗೆ ತರಬೇತಿಯನ್ನು ನೀಡುವುದು. ದಿನನಿತ್ಯ ಹೊಸತನವನ್ನು ಚೈತನ್ಯವನ್ನು ತುಂಬುವಂತಹ ಕೆಲಸ ಕಾರ್ಯಗಳ ತಾಯಂದಿರ ಮಾಡಬೇಕು. ನಮ್ಮ ಸಂಸ್ಥೆ ಮುಖಾಂತರ ಕೊಟ್ಟಿರುವಂತಹ ಸಾಧನ ಸಲಕರಣೆಗಳನ್ನು ಯಾವ ರೀತಿ ಬಳಸಬೇಕು. ಅವುಗಳನ್ನು ಹೇಗೆ ರಕ್ಷಣೆ ಮಾಡಬೇಕು ಅನ್ನುವುದರ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಸಭೆಯಲ್ಲಿ ತಾಯಂದಿರು ತಮ್ಮತಮ್ಮ ಮಕ್ಕಳ ಕುರಿತು ಅವಲೋಕಿಸಿರುವ ಕೆಲವು ವಿಷಯಗಳನ್ನ ವಿಶ್ಲೇಷಣೆಯನ್ನು ಸಭೆಯಲ್ಲಿ ಚರ್ಚಿಸಿದರು. ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡುವುದು ಅತ್ಯಂತ ಅವಶ್ಯಕವಾಗಿದೆ. ಸರ್ಕಾರದಿಂದ ಸಿಗುವಂತಹ ವಿವಿಧ ಯೋಜನೆಗಳಲಿನ ಸೌಲಭ್ಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಒಟ್ಟು 10 ಜನ ತಾಯಂದಿರು ಭಾಗವಹಿಸಿದ್ದರು.

### “ಮಕ್ಕಳಿಗೆ ಸಾಧನೆ ಸಲಕರಣೆಗಳ ಸಹಾಯದಿಂದ ಚಟುವಟಿಕೆ”



05 ಫೆಬ್ರುವರಿ 2026ರಂದು ಹುಮನಾಬಾದ ತಾಲೂಕಿನ ಹೋರವಲಯದ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಚೀನ್‌ಕೆರ ಗ್ರಾಮದಲ್ಲಿ ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳ ಪೋಷಕರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ 11 ಜನ ಪೋಷಕರು ಭಾಗವಹಿಸಿದರು. ಸಭೆಯಲ್ಲಿ ಮಕ್ಕಳಿಗೆ ಸಾಧನೆ ಸಲಕರಣೆಗಳ ಸಹಾಯದಿಂದ ಯಾವ ರೀತಿ ಚಟುವಟಿಕೆ ಮಾಡಬೇಕು, ಪ್ರತಿದಿನ ಸತತವಾಗಿ ಚಟುವಟಿಕೆ ಮಾಡುವುದರಿಂದ ಮಕ್ಕಳು ಬದಲಾವಣೆ ಹೊಂದುತ್ತಾರೆ ಎನ್ನುವುದರ ಬಗ್ಗೆ ಮಾಹಿತಿ ತಿಳಿಸಲಾಯಿತು. ಹಾಗೂ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಸಾಧಾರಣ ಮಕ್ಕಳ ಜೊತೆ ಬೆರೆತು ಆಟ ಆಡಲು ಅವಕಾಶ ಮಾಡಿಕೊಡಬೇಕು, ಅದರಿಂದ ಮಕ್ಕಳು ಸ್ವಲ್ಪಮಟ್ಟಿಗೆ ಬದಲಾವಣೆ ಹೊಂದುತ್ತಾರೆ. ಹಾಗೂ ಪೋಷಕರು ಸರಕಾರದಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ಹೆಚ್ಚಿನ ಗಮನವಹಿಸಬೇಕು. ಉದಾ: ಯುಡಿಐಡಿ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಮುಂತಾದವು ಪಡೆದುಕೊಳ್ಳಬೇಕಾದರೆ ಯಾವ ಯಾವ ಕಚೇರಿಗಳಿಗೆ ಹೋಗಬೇಕು ಎನ್ನುವುದರ ಬಗ್ಗೆ ಮಾಹಿತಿ ನೀಡಲಾಯಿತು.

### “ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಅನುಶ್ರೀ ಜೀವನದ ಚರಿತ್ರೆ ಮತ್ತು ಬದಲಾವಣೆ”



ಮಗುವಿನ ಹೆಸರು ಅನುಶ್ರೀ, ಜನ್ಮ ದಿನಾಂಕ 05 ನವೆಂಬರ್ 2018, ಒ.ಆರ್.ಟಿ ಸಂಖ್ಯೆ 242500029, ಲಿಂಗ ಹೆಣ್ಣು, ತಂದೆಯ ಹೆಸರು ಅನಿಲ್, ತಾಯಿಯ ಹೆಸರು ಚಂದ್ರಕಲಾ, ಕುಟುಂಬದ ಪ್ರಕಾರ, ವಿಭಕ್ತ ಕುಟುಂಬ, ವೈಕಲ್ಯದ ಪ್ರಕಾರ ಗ್ಲೋಬಲ್ ಡಿಲೆ ಡೆವಲಪ್ಮೆಂಟ್, ವಿಳಾಸ ಬೆಳಕೇರ ಚಿಡಗುಪ್ಪ ತಾಲೂಕ ಜಿಲ್ಲಾ ಬೀದರ್, ಗುರುತಿಸಿದ ದಿನಾಂಕ 9.12.2024. ಕುಟುಂಬದ ಹಿನ್ನೆಲೆ: ಮಗುವಿನ ತಂದೆ ಕೂಲಿ ಕೆಲಸದಲ್ಲಿದ್ದಾರೆ ತಾಯ ಗ್ರಹಿಣಿಯಾಗಿದ್ದಾಳೆ. ಇವರ ಕುಟುಂಬದಲ್ಲಿ ಒಟ್ಟು ಐದು ಜನ ಸದಸ್ಯರಿದ್ದಾರೆ. ಜನನ ಮತ್ತು ವೈದ್ಯಕೀಯ ಇತಿಹಾಸ: ಮಗು ಹುಟ್ಟಿದಾಗ ಅತ್ತಿರುವುದಿಲ್ಲ ಆಸ್ಪತ್ರೆಯಲ್ಲಿ 10 ದಿವಸಗಳ ಕಾಲ ಗಾಜಿನಲ್ಲಿ ಇಟ್ಟಿರುತ್ತಾರೆ. ಹಸ್ತಕ್ಷೇಪಕ್ಕೂ ಮೊದಲು ಇರುವ ಸ್ಥಿತಿ: ಮಗುವಿಗೆ ಸ್ವತಂತ್ರವಾಗಿ ಕುಳಿತುಕೊಳ್ಳಲು ಮತ್ತು ಎದ್ದು ನಿಲ್ಲುವುದು ಹಾಗೂ ಮಾತನಾಡಲು ಮತ್ತು ತನ್ನಿಂದ ತಾನೇ ಸಣ್ಣ ಪುಟ್ಟ ಚಟುವಟಿಕೆಗಳನ್ನು ಮಾಡಲು ಆಗುತ್ತಿರಲಿಲ್ಲ. ವೈಕಲ್ಯದ ಗುರುತಿಸುವಿಕೆ ಗ್ಲೋಬಲ್ ಡಿಲೇ ಡೆವಲಪ್ಮೆಂಟ್. ಕ್ಷೇತ್ರ ಅವಲೋಕನಗಳು, ತನ್ನ ಸಹಾಯದಿಂದ ಕುಳಿತುಕೊಳ್ಳುವುದು, ಯಾರದೇ ಸಹಾಯವಿಲ್ಲದೆ ನಡೆಯುವುದು, ತನ್ನ ಬೇಡಿಕೆಯನ್ನು ತಾನೇ ಈಡೇರಿಸಿಕೊಳ್ಳುವುದು. ತಾನಾಗಿ ಕೇಳಿಸಿಕೊಳ್ಳುವುದು. ಮಾತನಾಡುವುದು ಅರ್ಥ ಮಾಡಿಕೊಳ್ಳುವುದು. ಸಾಮಾಜಿಕ ವರ್ತನೆ ಇತರರ ಜೊತೆ ವರ್ತನೆ, ಸ್ವಯಂ ಆರೈಕೆ ದೈಹಿಕ ಚಟುವಟಿಕೆ, ಗಮನ ಮತು ಆಸಕ್ತಿ, ತಿನ್ನುವುದು, ಉಡುಪು ಧರಿಸುವುದು, ಸ್ವಚ್ಛತೆ, ಆಟದಲ್ಲಿ ಭಾಗವಹಿಸುವಿಕೆ, ಶಿಫಾರಸು ಮಾಡಿದ ಹಸ್ತಕ್ಷೇಪಗಳು: ಮಗುವಿಗೆ ಗುರುತಿಸಿ ಮೌಲ್ಯಮಾಪನ ಮಾಡಲಾಯಿತು. ಆರಂಭಿಕ ಉತ್ತೇಜನ ಮತ್ತು ಚಿಕಿತ್ಸಾ ಚಟುವಟಿಕೆಗಳು: ಸಹಾಯಕ ಸಾಧನಗಳು ಮತ್ತು ಉಪಕರಣಗಳು: ಬಿಎಲ್ ಜನರಲ್ ವರ್ಮ್ ಬ್ರೇಸ್. ಪೋಷಕರ ಸಹಾಯ: ಒಳ್ಳೆರೀತಿಯಿಂದ ಪ್ರೋತ್ಸಾಹ ಮಾಡುತ್ತಾರೆ. ಹಸ್ತಕ್ಷೇಪ ಚಟುವಟಿಕೆಗಳು ಉದ್ದೇಶ/ಫಲಿತಾಂಶ ಒಂದು ಕಡೆ ಸಪೋರ್ಟಿಂದ ಕೂಡಿಸುವುದು ಮಗು ಕುಳಿತುಕೊಳ್ಳುತ್ತಿದೆ. ನಿಲ್ಲಿಸುವುದು ಮತ್ತು ನಡೆಸುವುದು ಕೈ ಮೇಲೆ ತೂಕ ಹಾಕಿಸಿ ತನ್ನ ಕೈಇಂದ ಎಲ್ಲಾ ಕೆಲಸ ಮಾಡುತ್ತಿದೆ. ಶಬ್ದಗಳ ಮೂಲಕ ಸನ್ನ ಮಾಡಿಸುವುದು, ಎರಡಕ್ಷರದಿಂದ ಮಾತನಾಡಿಸುವುದು. ಅಪ್ಪ ಅಮ್ಮ ಅಂತ ಶಬ್ದ ಶಬ್ದದಿಂದ ಕುಟುಂಬದವರ ಜೊತೆ ಮಾತನಾಡುತ್ತಿದೆ. ಸಬ್ ಸೆಂಟರಿನಲ್ಲಿ ಮಕ್ಕಳ ಜೊತೆಗೆ ಬೆರೆತು ಆಟ ಆಡಿಸುವುದು. ಪೋಷಕರ ಮತ್ತು ಕುಟುಂಬದ ಭಾಗವಹಿಸುವಿಕೆ ಆರ್ಬಿಟ್ ಸಂಸ್ಥೆಯ ಸಾಧನ ಸಲಕರಣೆಗಳನ್ನು ಉಪಯೋಗಿಸಿಕೊಂಡು ನಡೆಯುತ್ತಿದ್ದಾಳೆ. ಇದನ್ನು ಕಂಡು ಪೋಷಕರು ಸಂತೋಷದಿಂದ ಆರ್ಬಿಟ್ ಮತ್ತು ಎಪಿಡಿ ಸಂಸ್ಥೆಯವರಿಗೆ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.

# “ನವಜೀವನ ಆರ್ಬಿಟ್ ಕಾರ್ಯಕ್ರಮ”

## “ರಮಾಬಾಯಿ ವಿಶೇಷ ಚೇತನರ ಸಂಘ ಸಭೆ”



10 ಫೇಬ್ರವರಿ 2026ರಂದು ಹುಮ್ನಾಬಾದ್ ತಾಲೂಕಿನ ಇಂದ್ರನಗರ್ ಗಲ್ಲಿಯಲ್ಲಿ ರಮಾಬಾಯಿ ವಿಶೇಷ ಚೇತನರ ಸಂಘ ಸಭೆಯಲ್ಲಿ ಒಟ್ಟು 09 ಜನರಿಗೆ ಮಾಹಿತಿ ತಿಳಿಸಲಾಯಿತು ಮತ್ತು ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿಕೊಳ್ಳಲು ತಿಳಿಸಲಾಯಿತು. ತಪ್ಪದೆ ಔಷಧಿಯನ್ನು ಕೊಡಬೇಕು ಮತ್ತು ಅವರಿಗೆ ಸರ್ಕಾರಿ ಸೌಲಭ್ಯವನ್ನು ಪಡೆದುಕೊಳ್ಳುವ ಹಾಗೆ ತಿಳಿಸಿದ್ದೇನೆ ಮತ್ತು ರೇಷನ್ ಕಾರ್ಡ್ ಆಧಾರ್ ಕಾರ್ಡ್ ತಿದ್ದುಪಡೆ, ಪ್ಯಾನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಇರಬೇಕೆಂದು ಅವರಿಗೆ ಮಾಹಿತಿ ನೀಡಿದ್ದೇನೆ. ಫಲಅನುಭವಿಗಳಿಗೆ ಡಿಎಂಎಚ್‌ಪಿ ಕ್ಯಾಪಿಗೆ ಕರೆದುಕೊಂಡು ಬರಲು ಮತ್ತು ಅವರನ್ನು ಡಾಕ್ಟರ್ ಮೂಲಕ ತಪಾಸಣೆ ಮಾಡಿಸುವ ಸಲುವಾಗಿ ಕರೆದುಕೊಂಡು ಬರಲು ಹೇಳಿದ್ದೇನ.

## “ಕ್ಯಾನ್ಸರ್ ರೋಗದ ಕುರಿತು ಅರಿವು”



19 ಫೇಬ್ರವರಿ 2026ರಂದು ಹುಮನಾಬಾದ ತಾಲೂಕಿನ ಕಬಿರಾಬಾದ್‌ವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ವತಿಯಿಂದ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಅರಿವು ಮೂಡಿಸಲಾಯಿತು. ಕ್ಯಾನ್ಸರ್ ರೋಗವು ಇತ್ತೀಚಿನ ದಿನಗಳಲ್ಲಿ ಅತಿ ವೇಗವಾಗಿ ಹರಡುತ್ತದೆ ಎಲ್ಲರೂ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ಪಡೆದುಕೊಂಡು. ಧೂಮಪಾನ ಮದ್ದೆಪಾನ ಇನ್ನಿತರ ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳಬೇಕು. ಹಾಗೂ ಕ್ಯಾನ್ಸರ್ ರೋಗಗಳಲ್ಲಿ ಏಳು ವಿಧದ ಕ್ಯಾನ್ಸರ್‌ಗಳನ್ನು ನಾವು ನೋಡಬಹುದು. ಕ್ಯಾನ್ಸರ್ ರೋಗದ ಬಗ್ಗೆ ಅರಿವನ್ನು ಪಡೆದುಕೊಂಡು ಅದರಿಂದ ದೂರವಾಗಿರಲು ಎಲ್ಲರೂ ಸಹಕರಿಸಬೇಕೆಂದು ತಿಳಿಸಲಾಯಿತು.

## “ಸರ್ಕಾರಿ ಆಸ್ಪತ್ರೆಯಲ್ಲಿ ಕ್ಯಾಂಪಿಗೆ ಬಂದವರಿಗೆ ಕ್ಯಾನ್ಸರ್ ಬಗ್ಗೆ ಮಾಹಿತಿ”



25 ಫೇಬ್ರವರಿ 2026ರಂದು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಯಾಂಪಿಗೆ ಬಂದವರಿಗೆ ಕ್ಯಾನ್ಸರ್ ಬಗ್ಗೆ ಮಾಹಿತಿ ತಿಳಿಸಲಾಯಿತುಮತ್ತು. ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿಕೊಳ್ಳಲು ತಿಳಿಸಲಾಯಿತು. ಮತ್ತೆ ತಂಬಾಕು ಗುಟ್ಕಾ ಸರಾಯಿ ಧೂಮಪಾನ ಸೇವನೆಯಿಂದ ದೂರವಿರಲು ಮಾಹಿತಿ ನೀಡಲಾಯಿತು. ಮತ್ತು ಅವರಿಗೆ ನಿಮ್ಮ ಮಕ್ಕಳಿಗೆ ನೀವು ಕುರುಕುರೆ ಸಹ ಕೊಡಬಾರದು ಅದರಲ್ಲಿ ಪ್ಲಾಸ್ಟಿಕ್ ಅಂಶ ಇರುವುದು ಅದಕ್ಕೆ ಮಾಹಿತಿ ನೀಡಲಾಯಿತು. ಕ್ಯಾನ್ಸರ್ ಲಕ್ಷಣಗಳು ಈ ಕೆಳಗಿನಂತಿವೆ ಗಂಟಲು ಕ್ಯಾನ್ಸರ್, ಚರ್ಮ ಕ್ಯಾನ್ಸರ್, ರಕ್ತ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಮೂತ್ರ ಮಾಡುವಾಗ ರಕ್ತ ಕಾಣಿಸಿಕೊಳ್ಳುವುದು. ಮತ್ತೆ ಮೂರು ವಾರಗಳಿಗಿಂತ ಹೆಚ್ಚು ಕಾಲ ಇರುವ ಬಾಯಿ ಅಥವಾ ನಾಲಿಗೆ ಹುಣ್ಣು ಥೈರಾಯ್ಡ್ ಕ್ಯಾನ್ಸರ್ ಮೋಳೆ ಕ್ಯಾನ್ಸರ್ ಲಕ್ಷಣಗಳು ಆಗಿರುತ್ತವೆ ಎಂದು ತಿಳಿಸಲಾಯಿತು.

## “ಮಾನಸಿಕ ಅಸ್ವಸ್ಥತೆ ಕುರಿತು ಸಂಘದ ಮಹಿಳೇಯರಿಗೆ ಜಾಗೃತಿ”



05 ಫೇಬ್ರವರಿ 2026ರಂದು ಹುಮನಾಬಾದ್ ತಾಲೂಕಿನ ಚೀನಕೇರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಸಂಘದ ಮಹಿಳೆಯರಿಗೆ ಮಾನಸಿಕ ಅಸ್ವಸ್ಥತೆ ಕುರಿತು ಸಮಾಜದಲ್ಲಿ ಇರುವ ಮೂಢನಂಬಿಕೆ ಹಾಗೂ ತಪ್ಪು ಕಲ್ಪನೆಗಳನ್ನು ದೂರ ಮಾಡುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಆರ್ಬಿಟ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಗಳ ಲಕ್ಷಣಗಳು, ಕಾರಣಗಳು ಹಾಗೂ ಚಿಕಿತ್ಸೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥತೆಯು ಯಾವುದೇ ವ್ಯಕ್ತಿಗೆ ಸಂಭವಿಸಬಹುದಾದ ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿದ್ದು, ಸಮಯಕ್ಕೆ ಸರಿಯಾದ ಚಿಕಿತ್ಸೆ ಮತ್ತು ಕುಟುಂಬದ ಬೆಂಬಲ ದೊರೆತರೆ ಸಂಪೂರ್ಣ ಗುಣಮುಖರಾಗಲು ಸಾಧ್ಯ ಎಂಬುದನ್ನು ವಿವರಿಸಲಾಯಿತು. ಜೊತೆಗೆ ಮಾನಸಿಕ ಅಸ್ವಸ್ಥರನ್ನು ತಿರಸ್ಕರಿಸದೆ ಪ್ರೀತಿ, ಸಹಾನುಭೂತಿ ಮತ್ತು ಗೌರವದಿಂದ ನೋಡಿಕೊಳ್ಳಬೇಕೆಂಬ ಸಂದೇಶವನ್ನು ನೀಡಲಾಯಿತು. ಒಟ್ಟು 12 ಜನ ಸಂಘದ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

# “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

## “ಮನ್ನಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮನೋ–ಸಾಮಾಜಿಕ ಶಿಕ್ಷಣ ಅಧಿವೇಶನ”



24 ಫೆಬ್ರವರಿ 2026ರಂದು ಬೀದರ್ ತಾಲೂಕು ಮನ್ನಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮನೋ–ಸಾಮಾಜಿಕ ಶಿಕ್ಷಣ ಅಧಿವೇಶನವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಢೇಶನ್ ವತಿಯಿಂದ ಆತ್ಮಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ಮನೋ–ಸಾಮಾಜಿಕ ಶಿಕ್ಷಣ ಅಧಿವೇಶನದಲ್ಲಿ ಫಲಾನುಭವಿಗಳಿಗೆ ಹಾಗೂ ಆರೈಕೆದಾರರಿಗೆ ತರಬೇತಿ ನೀಡಿದರು. ಅಧಿವೇಶನದಲ್ಲಿ ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಔಷಧಿ ನಿಯಮಿತವಾಗಿ ಸೇವಿಸುವ ಅಗತ್ಯತೆ, ಮರುಕಳಿಕೆ ತಡೆ ಕ್ರಮಗಳು ಹಾಗೂ ಕುಟುಂಬದ ಬೆಂಬಲದ ಮಹತ್ವ ಕುರಿತು ವಿವರವಾಗಿ ತಿಳಿಸಲಾಯಿತು. ಫಲಾನುಭವಿಗಳು ಮತ್ತು ಆರೈಕೆದಾರರು ಸಹಕಾರದಿಂದ ಭಾಗವಹಿಸಿ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಆಳವಾದ ಉಸಿರಾಟ ವ್ಯಾಯಾಮ, ದೈನಂದಿನ ಕ್ರಮವನ್ನು ಕಾಪಾಡಿಕೊಳ್ಳುವುದು, ಸಕಾರಾತ್ಮಕ ಚಿಂತನೆ, ದೈಹಿಕ ಚಟುವಟಿಕೆ ಹಾಗೂ ವಿಶ್ವಾಸಾರ್ಹ ವ್ಯಕ್ತಿಯೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುವುದು ಮುಂತಾದ ಎದುರಿಸುವ ತಂತ್ರಗಳನ್ನು ಸಹ ವಿವರಿಸಲಾಯಿತು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ, ಮಾನಸಿಕ–ಸಾಮಾಜಿಕ ಶಿಕ್ಷಣ ಮತ್ತು ಆಪ್ತ ಸಮಾಲೋಚನೆ”



26 ಫೆಬ್ರವರಿ 2026ರಂದು ಬೀದರ ತಾಲೂಕಿನ ಅನದೂರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ–ಸಾಮಾಜಿಕ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಢೇಶನ್ ಸಹಯೋಗದಲ್ಲಿ ಆಯೋಜಿಸಲಾಯಿತು. ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಸಾಲಗಾರೆ ಅವರು ಮಾನಸಿಕ–ಸಾಮಾಜಿಕ ಶಿಕ್ಷಣ ಸತ್ರವನ್ನು ನಡೆಸಿ ಫಲಾನುಭವಿಗಳು ಹಾಗೂ ಆರೈಕೆದಾರರಿಗೆ ತರಬೇತಿ ನೀಡಿದರು. ಕಾರ್ಯಕ್ರಮವು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವುದು ಹಾಗೂ ಅದು ನಮ್ಮ ಚಿಂತನೆಗಳು, ಭಾವನೆಗಳು ಮತ್ತು ವರ್ತನೆಗಳ ಮೇಲೆ ಬೀರುವ ಪರಿಣಾಮವನ್ನು ವಿವರಿಸುವುದನ್ನು ಮುಖ್ಯ ಉದ್ದೇಶವಾಗಿಸಿಕೊಂಡಿತ್ತು. ಮಾನಸಿಕ ಆರೋಗ್ಯ ಸಮಸ್ಯೆಗಳ ಸಾಮಾನ್ಯ ಕಾರಣಗಳು ಮತ್ತು ಲಕ್ಷಣಗಳನ್ನು ಸರಳ ಹಾಗೂ ಸುಲಭವಾಗಿ ಅರ್ಥವಾಗುವ ಭಾಷೆಯಲ್ಲಿ ಚರ್ಚಿಸಲಾಯಿತು. ವೈದ್ಯರು ಸೂಚಿಸಿದ ಔಷಧಿಯನ್ನು ನಿಯಮಿತವಾಗಿ ಸೇವಿಸುವ ಮಹತ್ವ, ನಿಯಮಿತ ಸಮಾಲೋಚನೆಗೆ ಹಾಜರಾಗುವ ಅಗತ್ಯತೆ ಹಾಗೂ ಕುಟುಂಬದ ಬಲವಾದ ಬೆಂಬಲದ ಪಾತ್ರವನ್ನು ಒತ್ತಿಹೇಳಲಾಯಿತು. ಒತ್ತಡವನ್ನು ಸಮರ್ಥವಾಗಿ ನಿರ್ವಹಿಸಲು ದೀರ್ಘ ಶ್ವಾಸ ವ್ಯಾಯಾಮ, ದಿನಚರಿಯನ್ನು ನಿಯಮಿತವಾಗಿ ಪಾಲಿಸುವುದು, ಸಕಾರಾತ್ಮಕ ಸ್ವಯಂ ಸಂಭಾಷಣೆ ಮತ್ತು ವಿಶ್ವಾಸಪಾತ್ರ ವ್ಯಕ್ತಿಯೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುವಂತಹ ಉಪಯುಕ್ತ ನಿಭಾಯಣಾ ತಂತ್ರಗಳ ಕುರಿತು ಮಾರ್ಗದರ್ಶನ ನೀಡಲಾಯಿತು.

## ಹಳ್ಳಿಖೇಡ್ (ಬಿ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ–ಸಾಮಾಜಿಕ ಶಿಕ್ಷಣ ಕಾರ್ಯಕ್ರಮ”



27 ಫೆಬ್ರವರಿ 2026 ಬೀದರ ತಾಲುಕಿನ ಹಳ್ಳಿಖೇಡ್ (ಬಿ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ–ಸಾಮಾಜಿಕ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಸಹಯೋಗದಲ್ಲಿ ಆಯೋಜಿಸಲಾಯಿತು. ಆಪ್ತ ಸಮಾಲೋಚಕಿಯಾದ ಶ್ರೀಮತಿ ರೂಪಾಲಿ ಸಾಲಗಾರೆ ಅವರು ಮಾನಸಿಕ–ಸಾಮಾಜಿಕ ಶಿಕ್ಷಣ ಸತ್ರವನ್ನು ನಡೆಸಿ, ಫಲಾನುಭವಿಗಳು ಹಾಗೂ ಆರೈಕೆದಾರರಿಗೆ ತರಬೇತಿ ನೀಡಿದರು. ಮಾನಸಿಕ ಆರೋಗ್ಯವು ದೈಹಿಕ ಆರೋಗ್ಯದಷ್ಟೇ ಮಹತ್ವದ್ದಾಗಿದೆ, ಏಕೆಂದರೆ ಅದು ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಹೇಗೆ ಯೋಚಿಸುತ್ತೇವೆ, ಭಾವಿಸುತ್ತೇವೆ ಮತ್ತು ವರ್ತಿಸುತ್ತೇವೆ ಎಂಬುದನ್ನು ಪ್ರಭಾವಿಸುತ್ತದೆ. ಒಬ್ಬ ವ್ಯಕ್ತಿ ನಿರಂತರ ದುಃಖ, ಭಯ, ಒತ್ತಡ ಅಥವಾ ಆಸಕ್ತಿ ಕಳೆದುಕೊಳ್ಳುವಂತಹ ಅನುಭವಗಳನ್ನು ಹೊಂದಿದಾಗ, ಅವು ದುರ್ಬಲತೆಗಳಲ್ಲ; ಬೆಂಬಲ ಮತ್ತು ಚಿಕಿತ್ಸೆಯ ಅಗತ್ಯವಿರುವ ಲಕ್ಷಣಗಳೆಂದು ಅರ್ಥಮಾಡಿಕೊಳ್ಳುವುದು ಅತ್ಯಂತ ಮುಖ್ಯ. ಸರಳ ಉಸಿರಾಟ ವ್ಯಾಯಾಮಗಳು ಮತ್ತು ವಿಶ್ರಾಂತಿ ತಂತ್ರಗಳು ಒತ್ತಡವನ್ನು ಕಡಿಮೆ ಮಾಡಿ ಭಾವನಾತ್ಮಕ ಸಮತೋಲನವನ್ನು ಸುಧಾರಿಸಲು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ತೋರಿಸಲು ಸಣ್ಣ ಯೋಗ ಪ್ರದರ್ಶನವನ್ನು ಕೂಡ ನಡೆಸಲಾಯಿತು. ಯೋಗವನ್ನು ನಿಯಮಿತವಾಗಿ ಅಭ್ಯಾಸ ಮಾಡುವುದು, ಔಷಧೋಪಚಾರ, ಸಮಾಲೋಚನೆ ಹಾಗೂ ಕುಟುಂಬದ ಬೆಂಬಲದೊಂದಿಗೆ ಮಾನಸಿಕ ಆರೋಗ್ಯವನ್ನು ಬಹಳ ಮಟ್ಟಿಗೆ ಸುಧಾರಿಸಲು ಸಹಾಯಕವಾಗುತ್ತದೆ.

## "ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ"



ದಿನಾಂಕ 3 ಫೆಬ್ರವರಿ 2026ರಂದು ಭಾಲ್ಕಿ ತಾಲೂಕಿನ ಏಣಕೂರ ಗ್ರಾಮದಲ್ಲಿ ಪ್ರೀತಿ ಎಂಬ ಹಾರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಒಂದು ಸಭೆಯಲ್ಲಿ, ಫಲಾನುಭವಿಗಳಿಗೆ ಪ್ರತಿದಿನ ಮಾತ್ರೆ ನೀಡುವುದು, ಫಲಾನುಭವಿಗಳಿಗೆ ಔಷಧಿಯನ್ನು ನಿರಂತರವಾಗಿ, ಪ್ರತಿದಿನ ವೈದ್ಯರ ಸಲಹೆಯಂತೆ ನೀಡುವುದರ ಮಹತ್ವವನ್ನು ಹಾಗೂ ಔಷಧಿಯನ್ನು ತಪ್ಪಿಸಿದರೆ ಉಂಟಾಗುವ ಸಮಸ್ಯೆಗಳ ಕುರಿತು ತಿಳಿಸಲಾಯಿತು. ಆರೈಕೆ ದಾರರ ಆರೋಗ್ಯ, ಅಸ್ವಸ್ಥರ ಆರೋಗ್ಯ ಹಾಗೂ ವಯಕ್ತಿಕ ವಾಗಿ ಮಾಡಾಬೇಕಾದ ಚಟುವಟಿಕೆ ಗಳ ಕುರಿತು ಮನದಟ್ಟು ಮಾಡಲಾಯಿತು. ಈ ಒಂದು ಸಭೆಯಲ್ಲಿ ಒಟ್ಟು ಎಂಟು ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## "ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯ"



ದಿನಾಂಕ 4 ಫೆಬ್ರವರಿ 2026ರಂದು ಔರಾದ್ ತಾಲೂಕಿನ ಲಿಂಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯಲ್ಲಿ ಸಂವಿಧಾನ ಪೀಠಿಕೆ ಧ್ಯಾನಿಸಲಾಯಿತು. ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ಸಭೆಯ ಆರಂಭದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸುನಿಲ್ ರವರ ಭಾರತ ಸಂವಿಧಾನದ ಪೀಠಿಕೆಯನ್ನು ವಾಚಿಸುವ ಮೂಲಕ ಸಭೆಗೆ ಗೌರವಪೂರ್ಣ ಹಾಗೂ ಜಾಗೃತಿಯ ಸಂದೇಶವನ್ನು ನೀಡಲಾಯಿತು. ಸಭೆಯಲ್ಲಿ ಭಾಗವಹಿಸಿದ ಆರೈಕೆದಾರರು ಸಂವಿಧಾನದ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಮತ್ತು ಮಾನವ ಗೌರವದ ಮಹತ್ವವನ್ನು ಅರಿತುಕೊಂಡರು. ಮಾನಸಿಕ ಅಸ್ವಸ್ಥರೂ ಸಮಾಜದ ಸಮಾನ ಹಕ್ಕುಗಳಿರುವ ನಾಗರಿಕರು ಎಂಬ ಅರಿವನ್ನು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥರ ಆರೈಕೆ ಮಾಡುವಾಗ ಎದುರಾಗುವ ಸವಾಲುಗಳು ಹಾಗೂ ಕುಟುಂಬದ ಪಾತ್ರ ಕುರಿತು ಚರ್ಚೆ ನಡೆಯಿತು. ಆರೈಕೆದಾರರು ತಮ್ಮ ಅನುಭವಗಳನ್ನು ಹಂಚಿಕೊಂಡು, ಪರಸ್ಪರ ಬೆಂಬಲ ನೀಡುವ ಅಗತ್ಯತೆಯನ್ನು ಒತ್ತಿಹೇಳಿದರು. ಸಭೆಯ ಮೂಲಕ ಮಾನಸಿಕ ಅಸ್ವಸ್ಥರ ಕುರಿತು ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರಮಾಡುವ ಜೊತೆಗೆ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಎಲ್ಲರನ್ನು ಗೌರವದಿಂದ ಕಾಣಬೇಕೆಂಬ ಸಂದೇಶವನ್ನು ನೀಡಲಾಯಿತು.

## "ಜೀವನದಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಮಾರ್ಗಗಳು ಅರಿವು"



ದಿನಾಂಕ 06 ಫೆಬ್ರವರಿ 2026 ರಂದು ಹುಲಸೂರ ತಾಲೂಕಿನ ಸೋಲ್‌ದಪಕಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಲೀವ್.ಲವ್.ಲಾಫ್ ಸಂಯುಕ್ತಶ್ರಾದಲ್ಲಿ ಆರೈಕೆ ದಾರರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ಒಟ್ಟು 8 ಜನರು ಭಾಗವಹಿಸಿದ್ದರು. ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ವ್ಯಕ್ತಿಗಳು ಮತ್ತು ಅವರ ಆರೈಕೆದಾರರಿಗೆ ಪರಸ್ಪರ ಬೆಂಬಲ, ಸಲಹೆ ಮತ್ತು ಮಾರ್ಗದರ್ಶನ ನೀಡುವು ದಾಗಿತ್ತು ಸಭೆಯ ಉದ್ದೇಶ. ಸಭೆಯಲ್ಲಿ ಫಲಾನುಭವಿಗಳಿಗೆ ನಿಯಮಿತವಾಗಿ ಔಷಧಿಗಳನ್ನು ನೀಡುವ ಮಹತ್ವ, ವೈದ್ಯರ ಸಲಹೆಗಳನ್ನು ಪಾಲಿಸುವ ಅಗತ್ಯತೆ, ದಿನನಿತ್ಯದ ಜೀವನದಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಮಾರ್ಗಗಳು, ಮನೋಬಲ ಹೆಚ್ಚಿಸುವ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಭಾಗವಹಿಸಿದವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಇದರಿಂದ ಪರಸ್ಪರ ಧೈರ್ಯ ಮತ್ತು ಆತ್ಮವಿಶ್ವಾಸ ಹೆಚ್ಚಿತು. ಸಂಪನ್ಮೂಲ ವ್ಯಕ್ತಿಗಳು ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿ, ಅಗತ್ಯ ಮಾರ್ಗದರ್ಶನ ನೀಡಿದರು.

## "ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮ"



ದಿನಾಂಕ 11 ಫೆಬ್ರವರಿ 2026 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲೀವ್.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ. ನಾಲಂದಾ ಅವರು ಮೇಕರ್ ಗ್ರಾಮದ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಿದ್ದರು. ಮೊದಲನೆಯದಾಗಿ ಆರ್ಬಿಟ್ ಸಂಸ್ಥೆಯ ಪರಿಚಯ ಮಾಡಲಾಗಿ, ಆರ್ಬಿಟ್ ಸಂಸ್ಥೆಯು ಒಂದು ಸಮಾಜ ಸೇವಕೇಂದ್ರವಗಿದ್ದು ಅನೇಕ ಸಮಾಜ ಸೇವೆಯ ಕಾರ್ಯಕ್ರಮಗಳು ನಡೆಯುತ್ತವೆ ಎಂದು ತಿಳಿಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರ ಬಗ್ಗೆ ಚರ್ಚಿಸಲಾಯಿತು. ಮಾನಸಿಕ ಕಾಯಿಲೆಯ ಕುರಿತು ಇರುವ ತಪ್ಪು ಕಲ್ಪನೆಗಳು ಹಾಗೂ ಮಾನಸಿಕ ಕಾಯಿಲೆ ಲಕ್ಷಣಗಳ ಬಗ್ಗೆ ಹೇಳಲಾಯಿತು. ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಡಾಕ್ಟರ್ ಹಾಗೂ ಆಶಾ ಕಾರ್ಯಕರ್ತರು ಭಾಗವಹಿಸಿ 40 ಜನರು ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಆರೋಗ್ಯದ ಮಹತ್ವದ ಕುರಿತು ಅರಿವು ಮತ್ತು ಆಪ್ತಸಮಾಲೋಚನೆ”



ದಿನಾಂಕ 20 ಫೆಬ್ರವರಿ 2026ರಂದು ಬೀದರ್ ತಾಲೂಕಿನ ಅಣದೂರ್ ಗ್ರಾಮದ ಮಾನಸಿಕ ಅಸ್ವಸ್ಥರಾದ ಲಕ್ಷ್ಮಿ ಗಂಡ ಶರಣಪ್ಪ ಅವರಿಗೆ ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಶ್ರೀಮತಿ ರೂಪಲಿ ಅವರು ಆಪ್ತಸಮಾಲೋಚನೆಯನ್ನು ಮಾಡಿದರು. ನಂತರ ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸಿ, ವಯಕ್ತಿಕ ಸ್ವಚ್ಚತೆ ಕುರಿತು ತಿಳಿಸಲಾಯಿತು. ಕೌನ್ಸಿಲರ್ ಅವರು ಕೌನ್ಸಿಲಿಂಗ್ ಮೂಲಕ ರೋಗಿಗಳು ತಮ್ಮ ನಕಾರಾತ್ಮಕ ಆಲೋಚನೆಗಳನ್ನು ಗುರುತಿಸಲು, ಆರೋಗ್ಯಕರ ಹೊಂದಾಣಿಕೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಮರುಕಳಿಸುವಿಕೆ, ತಡೆಯಲು ಸಹಾಯವಾಗುತ್ತದೆ ಎಂದು ವಿವರಿಸಿದರು. ಕುಟುಂಬದ ಸದಸ್ಯರು ಸಹ ಸಕ್ರಿಯವಾಗಿ ಭಾಗವಹಿಸಿ, ನಿರಂತರ ಭಾವನಾತ್ಮಕ ಬೆಂಬಲ ನೀಡುವುದರಿಂದ ರೋಗಿಯ ಚೇತರಿಕೆ ಮತ್ತು ಒಟ್ಟಾರೆ ಕಲ್ಯಾಣವನ್ನು ಬಲಪಡಿಸಬಹುದು ಎಂದು ತಿಳಿಸಿದರು.

## “ಹುಲಗುತ್ತಿ ಗ್ರಾಮದ ಮಾನಸಿಕ ಅಸ್ವಸ್ಥರಾದ ದೀಲಿಪ್ ತಂದೆ ಮಾರುತಿ ಅವರಿಗೆ ಆಪ್ತಸಮಾಲೋಚನೆ”



ದಿನಾಂಕ 23 ಫೆಬ್ರವರಿ 2026ರಂದು ಬಸವಕಲ್ಯಾಣ ತಾಲೂಕಿನ ಹುಲಗುತ್ತಿ ಗ್ರಾಮದ ಮಾನಸಿಕ ಅಸ್ವಸ್ಥರಾದ ದೀಲಿಪ್ ತಂದೆ ಮಾರುತಿ ಅವರಿಗೆ ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಶ್ರೀಮತಿ ರೂಪಾಲಿ ರವರು ಆಪ್ತಸಮಾಲೋಚನೆಯನ್ನು ಮಾಡಿದರು. ನಂತರ ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸಿದರು. ವೈಯಕ್ತಿಕ ಸ್ವಚ್ಚತೆ ಕುರಿತು ತಿಳಿಸಲಾಯಿತು. ಇಂದಿನ ಸಮಾಲೋಚನಾ ಅವಧಿಯಲ್ಲಿ ಒತ್ತಡ ಮತ್ತು ಭಾವನಾತ್ಮಕ ಸಮಸ್ಯೆಗಳನ್ನು ನಿಯಂತ್ರಿಸಲು ಆಳವಾದ ಉಸಿರಾಟ ವ್ಯಾಯಾಮ, ನಿಯಮಿತ ದಿನಚರಿ ಪಾಲನೆ ಮತ್ತು ಧನಾತ್ಮಕ ಸ್ವಯಂ–ಮಾತುಕತೆ ಎದುರಿಸುವ ತಂತ್ರಗಳನ್ನು ಪರಿಚಯಿಸಲಾಯಿತು. ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದು ಮತ್ತು ಫಾಲೋ–ಅಪ್‌ಗಾಗಿ ನಿಯಮಿತವಾಗಿ ಬರುವುದು ಅತ್ಯಂತ ಮಹತ್ವದ್ದಾಗಿದೆ ಎಂದು ವಿವರಿಸಲಾಯಿತು. ಇದರಿಂದ ಮರುಕಳಿಕೆ ತಡೆಯಲು ಮತ್ತು ಸ್ಥಿರವಾದ ಚೇತರಿಕೆ ಸಾಧಿಸಲು ಸಾಧ್ಯವಾಗುತ್ತದೆ. ಸಮಾಲೋಚನಾ ಅವಧಿಯಲ್ಲೆಲ್ಲಾ ರೋಗಿ ಸಹಕಾರದಿಂದ ವರ್ತಿಸಿ, ತನ್ನ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದರು ಮತ್ತು ಚಿಕಿತ್ಸೆಯನ್ನು ಮುಂದುವರಿಸಲು ಸಿದ್ಧತೆ ಹಾಗೂ ಉತ್ಸಾಹ ತೋರಿಸಿದರು.

## “ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ”



ದಿನಾಂಕ 5 ಫೆಬ್ರವರಿ 2026ರಂದು ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯಲ್ಲಿ ಸಂವಿಧಾನ ಪೀಠಿಕೆ ಧ್ಯಾನಿಸಲಾಯಿತು. ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ಸಭೆಯ ಆರಂಭದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಪೀಠರ್ ಭಾರತ ಸಂವಿಧಾನದ ಪೀಠಿಕೆಯನ್ನು ವಾಚಿಸುವ ಮೂಲಕ ಸಭೆಗೆ ಗೌರವಪೂರ್ಣ ಹಾಗೂ ಜಾಗೃತಿಯ ಸಂದೇಶವನ್ನು ನೀಡಲಾಯಿತು. ಸಭೆಯಲ್ಲಿ ಭಾಗವಹಿಸಿದ ಆರೈಕೆದಾರರು ಸಂವಿಧಾನದ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಮತ್ತು ಮಾನವ ಗೌರವದ ಮಹತ್ವವನ್ನು ಅರಿತುಕೊಂಡರು. ಮಾನಸಿಕ ಅಸ್ವಸ್ಥರೂ ಸಮಾಜದ ಸಮಾನ ಹಕ್ಕುಗಳಿರುವ ನಾಗರಿಕರು ಎಂಬ ಅರಿವನ್ನು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥರ ಆರೈಕೆ ಮಾಡುವಾಗ ಎದುರಾಗುವ ಸವಾಲುಗಳು ಹಾಗೂ ಕುಟುಂಬದ ಪಾತ್ರ ಕುರಿತು ಚರ್ಚೆ ನಡೆಯಿತು. ಆರೈಕೆದಾರರು ತಮ್ಮ ಅನುಭವಗಳನ್ನು ಹಂಚಿಕೊಂಡು, ಪರಸ್ಪರ ಬೆಂಬಲ ನೀಡುವ ಅಗತ್ಯತೆಯನ್ನು ಒತ್ತಿಹೇಳಿದರು. ಸಭೆಯ ಮೂಲಕ ಮಾನಸಿಕ ಅಸ್ವಸ್ಥರ ಕುರಿತು ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರಮಾಡುವ ಜೊತೆಗೆ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಎಲ್ಲರನ್ನು ಗೌರವದಿಂದ ಕಾಣಬೇಕೆಂಬ ಸಂದೇಶವನ್ನು ನೀಡಲಾಯಿತು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”



04 ಫೆಬ್ರವರಿ 2026ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ, ಗ್ರಾಮದ ಪ್ರಕಾಶ ಅಂಬೇಡ್ಕರ್ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ, ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ, ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯ ಲಕ್ಷಣಗಳು, ಮತ್ತು ರೋಗಕ್ಕೆ ಕಾರಣಗಳು ತಿಳಿಸಿ, ಆರ್ಬಿಟ್ ಸಂಸ್ಥೆಯು ಮುಖ್ಯವಾಗಿ ಇಂತಹ ವ್ಯಕ್ತಿಗಳನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ, ಅವರನ್ನು ತಾಲೂಕ ಆಸ್ಪತ್ರೆಯಲ್ಲಿ ಮನೋ ವೈದ್ಯರಿಂದ ಉಚಿತ ತಪಾಸಣೆ ಮತ್ತು ಚಿಕಿತ್ಸೆಯ ಮೂಲಕ ಸ್ಪಂದಿಸಿ, ಸತತವಾಗಿ ಮಾತ್ರೆಗಳು ದೊರಕಿಸಿ ಕೊಡುವುದರಲ್ಲಿ ಸಹಾಯ ಮಾಡುತ್ತಿದೆ. ತೀವ್ರ ಗತಿಯಿಂದ ಈ ಕಾಯಿಲೆಯಿಂದ ಬಳಲುತ್ತಿದ್ದವರನ್ನು, ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಲ್ಪಿಸಿಕೊಳ್ಳಲಾಗುತ್ತದೆ. ಇಂತಹ ವ್ಯಕ್ತಿಗಳು ಕಂಡು ಬಂದಲ್ಲಿ ತಕ್ಷಣವೇ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ 9036664271 ಕರೆ ಮಾಡಿ ಮಾಹಿತಿ ನೀಡಿ ಎಂದು ತಿಳಿಸಿದರು.

## "ಮಾನಸಿಕ ಅಸ್ವಸ್ಥರಿಗೆ ಹಾಗೂ ಅವರ ಫಲನುಭವಿಗಳ ಜೀವನೋಪಾಯಕ್ಕಾಗಿ ಹೊಲಿಗೆ ತರಬೇತಿ"



ದಿನಾಂಕ 18 ಫೆಬ್ರವರಿ 2025ರಂದು ಭಾಲ್ಕಿ ತಾಲೂಕಿನ ಹಲಬರ್ಗ ಗ್ರಾಮದಲ್ಲಿ ಗುಣಮುಖಗೊಂಡ ಮಾನಸಿಕ ಅಸ್ವಸ್ಥರಿಗೆ ಹಾಗೂ ಅವರ ಫಲನುಭವಿಗಳ ಜೀವನೋಪಾಯಕ್ಕಾಗಿ ಹೊಲಿಗೆ ತರಬೇತಿಯನ್ನು ಆರಂಭಿಸಲಾಯಿತು .ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟೀನಾ, ಸಂಯೋಜಕರಾದ ರಫಿ, ಪಂಚಾಯಿತಿ ಅಧ್ಯಕ್ಷರಾದ ಸ್ಥಳಿಯ ಸಿಬಿಆರ್‌ಆದ ಪ್ರಕಾಶ್ ಹಾಗೂ ಎಲ್ಲಾ ಕಾರ್ಯಕರ್ತರು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಸಿಸ್ಟರ್ ಕ್ರಿಸ್ಟೀನ ರವರು ಮಾತನಾಡಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿ ಅದರೊಂದಿಗೆ ಸಂಸ್ಥೆಯು ಪ್ರತಿ ವ್ಯಕ್ತಿಗೆ ಜೀವಿಸುವ, ನಗುವ ಹಾಗೂ ಪ್ರೀತಿಯ ಹಕ್ಕನ್ನು ಪಡೆದು ಕೊಡಲು ಮುಂದಾಗುತ್ತಿದೆ ಎಂದು ತಿಳಿಸಿದರು. ಸಂಯೋಜಕರಾದ ರಫಿ ರವರು ಸಂಸ್ಥೆಯ ಕುರಿತು ಹೆಚ್ಚಿನ ಮಾಹಿತಿ ನೀಡಿದರು. ಸರ್ವರಿಗೂ ಶುಭ ಹಾರೈಸಿ ಕಾರ್ಯಕ್ರಮ ಕೊನೆಗೊಂಡಿತು.

## "ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮ"



04 ಫೆಬ್ರವರಿ 2026ರಂದು ಬಸವಕಲ್ಯಾಣ ತಾಲೂಕಿನ ತಡೋಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲೀವ್. ಲವ್.ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತೆಯಾಗಿ ಶ್ರೀಮತಿ ಅನುರಾಧ ರವರು ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಯ ಬಗ್ಗೆ ಜನರಲ್ಲಿ ಇರುವ ತಪ್ಪು ನಂಬಿಕೆಗಳ ಬಗ್ಗೆ ತಿಳಿಸಲಾಯಿತು ಮತ್ತು ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಬಸವಕಲ್ಯಾಣ ಸರಕಾರಿ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ಉಚಿತವಾಗಿ ಚಿಕಿತ್ಸೆ ಇರುತ್ತದೆ. ನಿಮ್ಮ ಮನೆಯಲ್ಲಿ,ಕುಟುಂಬದಲ್ಲಿ,ನೆರೆಹೊರೆಯವರಲ್ಲಿ ಯಾರಾದರೂ ಕಂಡುಬಂದರೆ ನಿಮ್ಮ ಶಿಕ್ಷಕರಿಗೆ ಮಾಹಿತಿ ನೀಡಿ ಅವರು ಸಂಸ್ಥೆಗೆ ತಿಳಿಸುವಂತೆ ಹಾಗು ಸಮಾಜವನ್ನು ಪ್ರಗತಿ ಯತ್ತ ಕರೆದೊಯ್ಯುವಲ್ಲಿ ಸಹಕರಿಸಬೇಕೇಂದು ತಿಳಿಸಲಾ ಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸರಳ ರೀತಿಯಲ್ಲಿ ಮಾಹಿತಿಯನ್ನು ನೀಡಲಾಯಿತು. ಈ ಒಂದು ಜಾಗೃತಿ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಒಳಗೊಂಡು 35 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## "ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾನಸಿಕ ಅಸ್ವಸ್ಥತೆ ಆರೋಗ್ಯದ ಮಹತ್ವದ ಕುರಿತು ಅರಿವು"



ದಿನಾಂಕ 03 ಫೆಬ್ರವರಿ 2026ರಂದು ಬೀದರ್ ತಾಲೂಕಿನ ಕೊಳರ್ ಕೆ ಗ್ರಾಮದ ರಾಮಸ್ವಾಮಿ ಪಿರಿಯರ್ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ವಿಶೇಷ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ನವಜೀವನ ಟಟಟಜಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ ರವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತಾ, ಮಾನಸಿಕ ಆರೋಗ್ಯದ ವಿವರಣೆ, ಮಾನಸಿಕ ಅಸ್ವಸ್ಥತೆಗಳ ವಿಧಗಳು, ಅವುಗಳ ಲಕ್ಷಣಗಳು ಹಾಗೂ ಕಾರಣಗಳ ಕುರಿತು ವಿದ್ಯಾರ್ಥಿಗಳಿಗೆ ಸರಳ ಮತ್ತು ಸುಲಭ ಭಾಷೆಯಲ್ಲಿ ಮಾಹಿತಿ ನೀಡಲಾಯಿತು. ಮಾನಸಿಕ ಒತ್ತಡ, ಆತಂಕ,ಖಿನ್ನತೆ ಮುಂತಾದ ಸಮಸ್ಯೆಗಳನ್ನು ಗುರುತಿಸಿ ಸಮಯಕ್ಕೆ ಸರಿಯಾಗಿ ಸಹಾಯ ಪಡೆಯುವ ಅಗತ್ಯತೆಯನ್ನು ವಿವರಿಸಲಾಯಿತು. ಅಲ್ಲದೆ ಮಾನಸಿಕ ಅಸ್ವಸ್ಥರ ಬಗ್ಗೆ ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿ, ಅವರಿಗೆ ಸಹಾನುಭೂತಿ ಹಾಗೂ ಬೆಂಬಲ ನೀಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



ದಿನಾಂಕ 03 ಫೆಬ್ರವರಿ 2026ರಂದು ಬೀದರ್ ತಾಲೂಕಿನ ವಿದ್ಯಾನಗರ ಕಾಲೋನಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ಮಾನಸಿಕ ಕಾಯಿಲೆಯ ಕುರಿತು ಮಾತನಾಡಿದರು. ಮೊದಲಿಗೆ ಆರ್ಬಿಟ್ ಸಂಸ್ಥೆಯ ಪರಿಚಯವನ್ನು ನೀಡಿ ನಂತರದಲ್ಲಿ ಮಾನಸಿಕ ಆರೋಗ್ಯ ಮತ್ತು ಕಾಯಿಲೆ ಎಂದರೇನು? ಮಾನಸಿಕ ಕಾಯಿಲೆ ಲಕ್ಷಣಗಳ ಕುರಿತು ಮಾಹಿತಿಯನ್ನು ನೀಡಿದರು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದ್ದು ಇದನ್ನು ಚಿಕಿತ್ಸೆಯ ಮೂಲಕ ಗುಣಪಡಿಸಬಹುದು. ತನ್ನಲ್ಲಿ ತಾನು ಮಾತನಾಡುವುದು, ತನ್ನಲಿ ತಾನು ನಗುವುದು, ಭಯ, ಆತಂಕ, ಖಿನ್ನತೆ ಅಂತಹ ಲಕ್ಷಣಗಳು ನಿಮ್ಮ ಕೆಲಸದ ಸ್ಥಳಗಳಲ್ಲಿ ಹಾಗೂ ನಿಮ್ಮ ಮನೆಗಳಲ್ಲಿ ಕಂಡು ಬಂದರೆ ಅದರ ಮಾಹಿತಿ ನೀಡಿದರೆ ಸಂಸ್ಥೆ ವತಿಯಿಂದ ಭೇಟಿ ಮಾಡಿ ಇಂಥವರಿಗಾಗಿ ಸರಕಾರದಿಂದ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ನೀಡಲಾಗುವುದು ಎಂದು ತಿಳಿಸಲಾಯಿತು. ಹೆಚ್ಚಿನ ಮಾಹಿತಿಗಾಗಿ 9036664271 ಕರೆಮಾಡಿ ಸೂಕ್ತ ಮಾರ್ಗದರ್ಶನವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಲಾಯಿತು. ಈ ಒಂದು ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಸೇರಿ ಒಟ್ಟು 11 ಜನರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



04 ಫೆಬ್ರವರಿ 2026ರಂದು ಬಸವಕಲ್ಯಾಣ ತಾಲೂಕಿನ ಧನ್ನೂರ ಕೆ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್,ಲಾಫ್ ಫೌಂಡೇಶನ್ ರವರ ಸಂಯುಕ್ತ ಆಶ್ರಯದಲ್ಲಿ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ನವ ಜೀವನ ಲಿವ್ ಲವ್ ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆ ರವರು,ಮಾತನಾಡುತ್ತಾ ಪ್ರಸ್ತುತ ಸಮಾಜದಲ್ಲಿ ಎಲ್ಲರು ಒತ್ತಡ ದಿಂದ ಬಳಲುತ್ತಿರುವರು.ಆದರೆ ಆ ಒತ್ತಡವನ್ನು ಹೇಗೆ ನಿರ್ವಹಿಸಬೇಕು ಎಂಬ ಮಾಹಿತಿ ಇಲ್ಲದೆ ಅನೇಕರು ತಮ್ಮ ಮಾನಸಿಕ ಆರೋಗ್ಯ ವನ್ನು ಕಳೆದು ಕೊಳ್ಳುತ್ತಿರವರು.ಅಂಥವರು ಸಮಯದಿಂದ ದೂರ ಸರಿದು ಜನರ ಸಂಪರ್ಕ ದಿಂದ ದೂರವಾಗುವರು.ಅಂಥವರನ್ನು ಗುರುತಿಸಿ ಅವರಿಗೆ ಸಹಕಾರ ನೀಡಲು ಸಂಸ್ಥೆಯು ಮುಂದಾಗಿದೆ. ಈ ಕೆಲಸದಲ್ಲಿ ಪ್ರತಿ ವ್ಯಕ್ತಿಯ ಬೆಂಬಲದ ಅವಶ್ಯಕತೆ ಇದೆ ಎಂದು ಮನದಟ್ಟು ಮಾಡಲಾಯಿತು. ಬಸವಕಲ್ಯಾಣ ಸರಕಾರಿ ಆಸ್ಪತ್ರೆಯಲ್ಲಿ ಅಂಥವ ರಿಗೆ ಪ್ರತಿ ಮಂಗಳವಾರ ಉಚಿತವಾಗಿ ಚಿಕಿತ್ಸೆ ಇರುತ್ತದೆ ಎಂಬ ಮಾಹಿತಿಯನ್ನು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿ ಗಳಿಗೆ ನೀಡಲಾಯಿತು. ಈ ಒಂದು ಜಾಗೃತಿ ಕಾರ್ಯಕ್ರಮದಲ್ಲಿ 4 ಶಿಕ್ಷಕರು 55 ಮಕ್ಕಳು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

# "ಕ್ಯಾನ್ಸರ್ ಆರ್ಬಿಟ್ ಕಾರ್ಯಕ್ರಮ"

## "ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಆಗಸ್ಟೀನ್ ಆಂಗ್ಲಾ ಮಾಧ್ಯಾಮ ಶಾಲೆ ಹಳ್ಳಿಖೇಡ್ (ಬಿ) ಯಲ್ಲಿ ಕ್ಯಾನ್ಸರ್ ಆಂದೋಲನ ಕುರಿತು ಜಾಗೃತಿ ಕಾರ್ಯಕ್ರಮ"



ಹುಮನಾಬಾದ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದ ಆಗಸ್ಟೀನ್ ಆಂಗ್ಲಾ ಮಾಧ್ಯಾಮ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ಮತ್ತು ಕಾರಿಥಾಸ್ ಇಂಡಿಯಾ ಇವರ ಸಹಯೋಗದಲ್ಲಿ, ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೋಹಾನ ಏಚ್ ವಾಲಿ ಅವರು 04 ಫೆಬ್ರವರಿ 2026 ರಂದು "ವಿಶ್ವ ಕ್ಯಾನ್ಸರ್ ದಿನಾಚರಣೆ" ಅಂಗವಾಗಿ ಶಾಲೇಯ ಮಕ್ಕಳಿಗು ಹಾಗೂ ಶೀಕ್ಷಕರಿಗು ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜನೆಯನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಮಾತನ್ನಾಡಿದ ಯೋಹಾನ ಏಚ್ ವಾಲಿ ಯವರು ಕ್ಯಾನ್ಸರ್ ಎಂಬುದು ನಿರ್ದಿಷ್ಟ ಕಾರಣಗಳು ಗುರುತಿಸಲು ಸಾಧ್ಯವಾಗದಿದ್ದರೂ ಹಲವು ಕಾರಣಗಳು ಸೇರಿ ಕ್ಯಾನ್ಸರ್ ಸಂಭವಿಸುತ್ತದೆ. ದೇಹದ ಯಾವುದೇ ಭಾಗದಲ್ಲಿ ಬರಬಹುದು. ಕ್ಯಾನ್ಸರ್‌ನಲ್ಲಿ ಜೀವಕೋಶಗಳ ವಿಭಜನೆ ಹಾಗೂ ಬೇಳವಣಿಗೆಯು ಸಹಜವಾಗಿ ಆಗದೇ ಅಸಹಜ ಹಾಗೂ ಅನಿಯಂತ್ರಿತವಾಗಿ ಆಗುತ್ತದೆ. ಅಷ್ಟೇ ಅಲ್ಲದೆ ಬೇರೆ ಭಾಗಗಳಲ್ಲಿ ದಾಳಿಮಾಡಿ ಶ್ವಾಶಕೋಶ ನಾಶ



ಮಾಡುತ್ತದೆ. ಉದಾ:- ಮೂಗು, ಮೆದುಳು, ಶ್ವಾಶಕೋಶ ನಾಶ ಮಾಡುತ್ತದೆ. ಕ್ಯಾನ್ಸರ್ ಯಾವುದೇ ಭಾಗದಿಂದ ನಮ್ಮ ದೇಹದಲ್ಲಿ ಬಂದು ಸೇರಬಹುದು ಎಂದು ತಿಳಿಸಿದರು. ಕ್ಯಾನ್ಸರ್ ವಿಧಗಳಾದ ಗಂಟಲು ಕ್ಯಾನ್ಸರ್, ಚರ್ಮ ಕ್ಯಾನ್ಸರ್, ರಕ್ತದ ಕ್ಯಾನ್ಸರ್, ಜಠರ ಕ್ಯಾನ್ಸರ್, ಮೂಳೆ ಕ್ಯಾನ್ಸರ್, ಥೈರಾಡ್ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಹಾಗೂ ಸ್ತ್ರಿಯರಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಬರುತ್ತವೆ ಎಂದು ತಿಳಿಸಿದರು. ಮೂರು ವಾರಗಳಿಗಿಂತ ಹೇಚ್ಚು ಕಾಲ ಇರುವ ಬಾಯಿ ನಾಲೀಗೆ ಹುಣ್ಣು, ರಕ್ತವನ್ನು ಕೆಮ್ಮುವುದು, ಮೂತ್ರ ಮಾಡುವಾಗ ರಕ್ತ ಕಾಣಿಸಿಕೋಳ್ಳುವುದು, ಮೂತ್ರವಿಸರ್ಜನೆಯಲ್ಲಿ ತೋಂದರೆಗಳು ಹಾಗೂ ತೂಕದಲ್ಲಿ ಇಳಿಕೆ ಹಾಗೂ ರಾತಿ ಬೆವರುವುದು, ನಿರಂತರ ಆಯಾಸವಾಗುವುದು, ಚರ್ಮದಲ್ಲಿ ಗಡ್ಡೆಗಳು ಗಟ್ಟಿಯಾಗಯವುದು, ಪದೇ ಪದೇ ಬಾಧಿಸುವ ಜ್ವರ, ಚರ್ಮದಲ್ಲಿ ಬದಲಾವಣೆಗಳು, ಮಲ ಮೂತ್ರ ವಿಸರ್ಜನೆ ಬಾಧೆ, ಒಣ ಕೆಮ್ಮು ಅಥವಾ ಕಫಯುಕ್ತ ಕೆಮ್ಮು, ಅಸಹಜ ರಕ್ತಸ್ರಾವ ಹಾಗೂ ಆಹಾರ ಸೇವಿಸಲು ಸಮಸ್ಯ ಇಂತಹ ಎಲ್ಲಾ ಕ್ಯಾನರ್‌ನ ಲಕ್ಷಣಗಳು ಕಂಡುಬರುತ್ತವೆ ಎಂದು ತಿಳಿಸಿದ್ದರು. ಸೇಬು, ಕಿತ್ತಳೆ ಹಣ್ಣು, ಗೆಣಸು, ಬಿಳಿ ಮೂಲಂಗಿ, ಬೆಳ್ಳುಳ್ಳಿ, ಪಾಲಕ ಸೂಪ್ಪು ಹಾಗೂ ಕೋಸುಗಡ್ಡ ಪದಾರ್ಥಗಳನ್ನು ಸೇವಿಸಬೇಕು. ತಂಬಾಕು ಬಳಸಬಾರದು, ಒಳ್ಳೆ ಆರೋಗ್ಯದ ಆಹಾರವನ್ನು ಸೇವಿಸಬೇಕು, ಸರಿಯಾದ ತೂಕವನ್ನು ಕಾಪಾಡಿಕೊಳ್ಳಬೇಕು, ಪ್ರತಿರೋಧಕ ಚುಚ್ಚುಮದ್ದು ತೆಗೆದುಕೊಳ್ಳಬೇಕು, ಬಿಸಿಲಿನಿಂದ ನಿಮ್ಮ ತ್ವಚೇಯನ್ನು ರಕ್ಷೀಸಿಕೋಳ್ಳಬೇಕು. ಯೋಗಾಸನಗಳು ಮಾಡಬೇಕು, ಪ್ಲಾಷ್ಟಿಕ್ ಬಳಸಬಾರದು ಮತ್ತು ಪ್ಲಾಷ್ಟಿಕ್ ಸುಡುವಂತೆ ಮಾಡಿ ಅದರ ಷ್ವಶನೆ ತೆಗೆದುಕೋಳ್ಳಬಾರರು, ವಿಳದೆಲೆಯೆಲ್ಲಿ ಸುಣ್ಣ ತಂಬಾಕು ಮಿಶ್ರಣಮಾಡಿ ತಿನ್ನಬಾರದು. ಮಧ್ಯಾಪಾನ ಮಾದಬಾರದು ಇವುಗಳಿಂದ ದೂರವಿರಬೇಕು ಎಂದು ಸ್ಪಷ್ಟವಾಗಿ ತೀಳಿಸಿದ್ದರು. ಈ "ವಿಶ್ವ ಕ್ಯಾನ್ಸರ್ ದಿನಾಚರಣೆ" ಕಾರ್ಯಕ್ರಮದಲ್ಲಿ ಶಿಘ್ರ ಪತ್ತೆಹಚ್ಚುವಿಕೆ ಮತ್ತು ಆರಂಬಿಕ ಶಿಕ್ಷಣದ ಕಾರ್ಯಾಕ್ರಮದ ಸಂಯೋಜಕಿ ಶ್ರೀಮತಿ ಮಮತಾ, ಶಾಲೆಯ ನಿರ್ಧೇಶಕರಾದ ಭಾಸ್ಕರ್ ಸರ್, ಶಾಲಾ ಮುಖ್ಯ ಗುರುಗಳು, ಶಿಕ್ಷಕ ವರ್ಗದವರು ಹಾಗೂ ಶಾಲೆಯ ಮಕ್ಕಳು ಸೇರಿ 558 ಜನರು ಭಾಗವಹಿಸಿದ್ದರು.



## “ವಿಶ್ವ ಕ್ಯಾನ್ಸರ್ ನಿರ್ಮೂಲನ ದಿನಾಚರಣೆ ಮಾಹಿತಿ ಕಾರ್ಯಗಾರ”



ದಿನಾಂಕ 04 ಫೆಬ್ರುವರಿ 2026ರಂದು ಚಿಟಗುಪ್ಪ ತಾಲೂಕಿನ ವಡ್ಡನ್ಕೇರೆ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತಾ ಆಶ್ರಯರದಲ್ಲಿ ವಿಶ್ವ ಕ್ಯಾನ್ಸರ್ ನಿರ್ಮೂಲನ ದಿನಾಚರಣೆ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಶ್ರೀ ಯವನ್ ಕ್ಯಾನ್ಸರಕಾರ್ಯಕ್ರಮದ ಸಂಯೋಜಕರು. ಕ್ಯಾನ್ಸರ್ ರೋಗ ಎಂದರೇನು? ಕ್ಯಾನ್ಸರ್ ಎಂಬುದು ದೇಹದ ಕೆಲವು ಕೋಶಗಳು ನಿಯಂತ್ರಣವಿಲ್ಲದೆ ಹೆಚ್ಚಾಗಿ ಬೆಳೆಯುವ ರೋಗ ಈ ಅಸಹಜ ಕೋಶಗಳು ದೇಹದ ಇತರ ಭಾಗಗಳಿಗೆ ಹರಡಿ ಗಂಭೀರ ಸಮಸ್ಯೆ ಉಂಟುಮಾಡಬಹುದು. ಇದು ದೇಹದ ಯಾವುದೇ ಭಾಗದಲ್ಲೂ ಕಾಣಿಸಿಕೊಳ್ಳಬಹುದು. ಭಾರತದಲ್ಲೂ ಇದರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ ಆದ್ದರಿಂದ ಇದು ದೊಡ್ಡ ಸಾರ್ವಜನಿಕ ಆರೋಗ್ಯ ಸಮಸ್ಯೆ. ಕ್ಯಾನ್ಸರ್ ತಡವಾಗಿ ಪತ್ತೆಯಾದರೆ ಜೀವಕ್ಕೆ ಭಾರೀ ಅಪಾಯ ಉಂಟಾಗಬಹುದು ಆದರೆ ಆರಂಭಿಕ ಹಂತದಲ್ಲಿ ಪತ್ತೆಯಾದರೆ ಚಿಕಿತ್ಸೆ ಪಡೆದುಕೊಳ್ಳಲು ಸಹಾಯವಾಗುತ್ತದೆ ಕ್ಯಾನ್ಸರ್ ಬಗ್ಗೆ ಜನರಲ್ಲಿ ಜಾಗೃತಿ ಕಡಿಮೆ ಇರುವುದರಿಂದ ಅನೇಕರು ಲಕ್ಷಣಗಳನ್ನು ನಿರ್ಲಕ್ಷ ಮಾಡುತ್ತಾರೆ ಇದು ತಂಬಾಕು ಸೇವನೆ, ಮದ್ಯಪಾನ ಅಸಮತೋಲನ ಆಹಾರ ದೈನಂದಿಕ ಚಟುವಟಿಕೆಯ ಕೊರತೆ ಇವು ಕ್ಯಾನ್ಸರ್ ಗೆ ಪ್ರಮುಖ ಕಾರಣಗಳು ಆರೋಗ್ಯಕರ ಜೀವನ ಶೈಲಿ . ಕ್ಯಾನ್ಸರ್ ಒಂದು ಗಂಭೀರ. ಆದರೆ ತಡೆಯ ಬಹುದಾದ ಮತ್ತು ಚಿಕಿತ್ಸೆ ನೀಡಬಹುದಾದ ರೋಗ ಅದರ ಮಹತ್ವವನ್ನು ಅರಿತು ಜಾಗೃತಿ ಮುನ್ನೆಚ್ಚರಿಕೆ ಮತ್ತು ಸಮಯಕ್ಕೆ ಸರಿಯಾದ ಚಿಕಿತ್ಸೆ ಪಡೆಯುವುದು ಅತ್ಯಂತ ಅಗತ್ಯ. ಕ್ಯಾನ್ಸರ್ ಚಿಕಿತ್ಸೆಗೆ ಹೆಚ್ಚಿನ ವೆಚ್ಚ ಬೇಕಾಗುತ್ತದೆ ಇದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಒಳಗಾಗುತ್ತಿವೆ ಹಾಗಾಗಿ ಇದರಿಂದ ಪ್ರತಿಯೊಬ್ಬರು ಆರೋಗ್ಯದ ಕಡೆ ಗಮನ ಹರಿಸಿ ಜಾಗ್ರತರಾಗಬೇಕೆಂದು ಮಾಹಿತಿ ತಿಳಿಸಿದರು. ಈ ಕಾರ್ಯಗಾರದಲ್ಲಿ ಶಾಲೆಯ ಮುಖ್ಯ ಗುರುಗಳು ಅಂಗನವಾಡಿ ಕಾರ್ಯಕರ್ತೆ ಅರಣ್ಯ ರಕ್ಷಕ ಸಿಬ್ಬಂದಿ ಸಂಗ ಮತ್ತು ಸಮುದಾಯದ ಒಟ್ಟು 27 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡಿರುತ್ತಾರೆ.

## “ಆರ್ಬಿಟ್ ಮತ್ತು ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಡಾನ್ ಬಾಸ್ಕೋ, ಸಂಯೋಗದಲ್ಲಿ ಚಿಟ್ಟಾ ಗ್ರಾಮದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರ”



ದಿನಾಂಕ 26 ಫೆಬ್ರುವರಿ 2026ರಂದು ಬೀದರ್ ತಾಲೂಕಿನ ಚಿಟ್ಟಾ ಗ್ರಾಮದ ಗ್ರಾಮ ಪಂಚಾಯತ ಹಾಗೂ ಆರೋಗ್ಯ ಕ್ಷೇಮ ಕೇಂದ್ರದ ಆವರಣದಲ್ಲಿ ಆರ್ಬಿಟ್ ಸೇವಾ ಸಂಸ್ಥೆ ಹುಮನಾಬಾದ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಗುಲ್ಬರ್ಗ, ಡಾನ್ ಬಾಸ್ಕೋ ಹಾಗೂ ವೆಲ್ಮೆಗ್ನ ಸೈಲೆನ್ಸ್ ಆಸ್ಪತ್ರೆ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಕ್ಯಾನ್ಸರ್ ತಪಾಸಣಾ ಶಿಬಿರದಲ್ಲಿ ಡಾನ್ ಬಾಸ್ಕೋ ಸಂಸ್ಥೆಯ ನಿರ್ದೇಶಕರಾದ ಫಾದರ್ ಸ್ಟೀವನ್ ಲಾರೆನ್ಸ್ ಅವರು ಮುಖ್ಯ ಅತಿಥಿ ಸ್ಥಾನವನ್ನು ವಹಿಸಿದರು. ಇಂಡಿಯನ್ ಕ್ಯಾನ್ಸರ್ ಸುಸೈತಿಯಯ ವೈದ್ಯರಾದ ಡಾ. ಸುಶ್ಮಿತಾ, ಸಿ ಎಚ್ ಓ ನಜರೆತ್, ಗ್ರಾಮ ಪಂಚಾಯ ಅಭಿವೃದ್ಧಿ ಅಧಿಕಾರಿಗಳು ಮತ್ತು ಸೆಕ್ರೆಟರಿ, ಅತಿಥಿಗಳಾಗಿದ್ದರು. ಆರ್ಬಿಟ್ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೊಹಾನ್ ವಾಲಿ, ಕಾರ್ಯಕರ್ತೆ ರೋಸ್ ಮೇರಿ, ಆನಂದ ಹಾಗೂ ಡಾನ್ ಬಾಸ್ಕೋ ಸೀಮನ್ ಸರ್, ರಾಜೇಶ್ರೀ ಮೇಡಂ, ಆಶಾ ಕಾರ್ಯಕರ್ತೆಯರು ಅತ್ತು ಗ್ರಾಮಸ್ಥರು ಉಪಸ್ಥಿತರಿದ್ದರು. ಆರೋಗ್ಯವೇ ಭಾಗ್ಯ ಎಂಬ ದ್ಯೆಯ ವಾಕ್ಯದೊಂದಿಗೆ ಕ್ಯಾನ್ಸರ್ ರೋಗದ ಕುರಿತು ಮತ್ತು ಕ್ಯಾನ್ಸರ್ ತಪಾಸಣೆಯ ಉದ್ದೇಶ ಕುರಿತು ತಿಳಿಸಿದರು. ನಮ್ಮ ಆರೋಗ್ಯ ನಾವೇ ಕಾಪಾಡಿಕೊಳ್ಳಬೇಕು ನಮ್ಮ ಜೀವನದಲ್ಲಿ ಎಲ್ಲದರಿಂದ ಆರೋಗ್ಯದ ಜೀವನ ಜೀವಿಸಬೇಕು ಎಂದು ಪ್ರಾಸ್ತಾವಿಕ ನುಡಿಗಳನ್ನು ನುಡಿದ್ದರು. ಆರ್ಬಿಟ್ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೊಹಾನ್ ವಾಲಿ ಅವರು ಸುಮಾರ 33 ವರ್ಷಗಳಿಂದ ಬೀದರ್ ನಾಡಿನ 8 ತಾಲೂಕಗಳಲ್ಲಿ ವಿಧವಾದ ಸಮಾಜ ಸೇವೆಯನ್ನು ಮಾಡುತ್ತಾ ಬರುತ್ತಿದ್ದು ಮಾನಸಿಕ ಆರೋಗ್ಯ, ಬೆಳವಣಿಗೆಯಲ್ಲಿ ಕುಂಠಿತ, ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ಸಮಾಜದ ಜನರಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಇದರಲ್ಲಿ ಕ್ಯಾನ್ಸರ್ ಎಂಬುದು ತುಂಬ ಜನರಲ್ಲಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದ್ದು. ತಮ್ಮ ಜೀವಿಸುವ ಜೀವನವನ್ನು ನಸ್ಯ ಪಡಿಸುತ್ತಿದೆ ಅದನ್ನು ನಾವು ಅರಿಯದೇ ಬೇಜವಾಬ್ದಾರಿಯಿಂದ ಇರುತ್ತೇವೆ ಅದಕ್ಕಾಗಿ ಕ್ಯಾನ್ಸರ್ ಬರುವುದಕ್ಕಿಂತ ಮುಂಚಿತವಾಗಿಯೇ ನಾವು ತಪಾಸಣೆಯನ್ನು ಮಾಡಿಸಿಕೊಂಡು ಪ್ರಾರಂಭದಲ್ಲಿಯೇ ಪತ್ತೆ ಹಚಿ ಉತ್ತಮ ಚಿಕಿತ್ಸೆಯನ್ನು ಮಾಡಿಕೊಂಡು ಗುಣಮುಖರಾಗಬಹುದು. ಹಾಗೂ ಒಳ್ಳೆಯ ಆರೋಗ್ಯದ ಜೀವನ ನಡೆಸಬಹುದು. ಈ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಪಡೆದುಕೊಂಡು ಆರೋಗ್ಯವಂತರಾಗಿ ಇರಬೇಕು ಎಂದು ಸ್ಪಷ್ಟವಾಗಿ ತಿಳಿಸಿದರು. ಈ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ಗ್ರಾಮದ 57 ಜನರು ತಪಾಸಣೆ ಮಾಡಿಸಿಕೊಂಡರು ಹಾಗೂ 22 ಜನರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು. 08 ಜನರಿಗೆ ಕಣ್ಣಿನ ಸಮಸ್ಯೆ ಇರುವುದರಿಂಗ ಸೈಲೆನ್ಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದಕಾಗಿ ತಿಳಿಸಿದರು. ಈ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರದಲ್ಲಿ 93 ಜನರು ಉಪಸ್ಥಿತರಿದ್ದರು. ಸುಮಾರು 4:30 ಗಂಟೆಗೆ ಮುಕ್ತಾಯ ಮಾಡಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ ಆನಂದ್ ಎಲ್ ಎಲ್ ಎಲ್ ಏಪ್ ಕ್ಷೇತ್ರ ಮೇಲ್ವಿಚಾರಕರು ನಿರೂಪಣೆ ಮಾಡಿದರು. ಶ್ರೀ ಯೊಹಾನ್ ವಾಲಿ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರು ಸ್ವಾಗತಿಸಿದರು, ಮಹಿಳಾ ಸಬಲೀಕರಣ ಆರ್ಬಿಟ್ ಕಾರ್ಯಕ್ರಮದ ಕಾರ್ಯಕರ್ತೆ ರೋಸ್ ಮೇರಿ ಅವರು ವಂದಿಸಿದರು.





# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಕ್ಯಾನ್ಸರ್ ಕುರಿತು ಜಾಗೃತಿ”

25 ಫೆಬ್ರವರಿ 2026ರಂದು ಕಲಬುರ್ಗಿ ತಾಲೂಕಿನಲ್ಲಿ ಬರುವ ಸೀತನೂರ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ್ ರವರು ಮಾತನಾಡಿ ಕ್ಯಾನ್ಸರ್ ಎಂದರೇನು? ಕ್ಯಾನ್ಸರ್ ರೋಗಬರಲು ಕಾರಣಗಳು, ಕ್ಯಾನ್ಸರ್ ವಿಧಗಳು, ಕ್ಯಾನ್ಸರ್ ರೋಗಕ್ಕೆ ಇರುವ ಚಿಕಿತ್ಸೆಗಳು ಹಾಗೂ ಈ ರೋಗಕ್ಕೆ ತುತ್ತಾಗದೆ ಇರುವುದಕ್ಕೆ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಕ್ಕಳಲ್ಲಿ ಅರಿವನ್ನು ಮೂಡಿಸಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶಾಲಾ ಮುಖಗುರುಗಳು ಮತ್ತು ಶಿಕ್ಷಕ ವೃಂದದವರು ಉಪಸ್ತಿತರಿದ್ದರು. ಈ ಕಾರ್ಯಕ್ರಮದಲ್ಲಿ 50 ಜನ ವಿದ್ಯಾರ್ಥಿಗಳು ಭಾಗವಹಿಸಿದರು.



## “ಪೌಷ್ಟಿಕ ಆಹಾರದ ಕುರಿತು ಅರಿವಿನ ಕಾರ್ಯಕ್ರಮ”

05 ಫೆಬ್ರುವರಿ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ್ ಅವರ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಭೀಮಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಯಲ್ಲಿ ಪೌಷ್ಟಿಕ ಆಹಾರದ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ತರಕಾರಿಗಳನ್ನು ಸೇವನೆ ಮಾಡೋದು ಮುಖ್ಯವಾಗಿದೆ ಅದರಲ್ಲೂ ಸೊಪ್ಪಿನ ತರಕಾರಿ ಪಾಲಕ್ಕು ಮೆಂತೆ ಇವುಗಳನ್ನು ಸೇವಿಸುವುದರಿಂದ ಪೌಷ್ಟಿಕಾಂಶಗಳು ಸಿಗುತ್ತದೆ ಎಂದು ಲಕ್ಷ್ಮಿ ಅವರು 12 ಜನರಿಗೆ ಮಾಹಿತಿ ತಿಳಿಸಲಾಯಿತು.



## “ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಅರಿವಿನ ಕಾರ್ಯಕ್ರಮ”

16 ಫೆಬ್ರುವರಿ 2026ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೇಶನ್ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಬೆಳವಣಿಗೆ ಕುಂಠಿತ ವಿರುವ ಕುರಿತು ಕಲ್ಬುರ್ಗಿ ನಗರದ ಕೋಬ್ರಾ ಕಾಲೋನಿ ಏರಿಯಾದ ಎರಡನೆ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು ಮತ್ತು ವಿಶೇಷ ಚೈತನ ವಿರುವ ಮಕ್ಕಳ ವಿಧಗಳ ಕುರಿತು ಹಾಗೂ ಅವುಗಳ ಲಕ್ಷಣಗಳ ಕುರಿತು ವಿವರಿಸಿತಿಳಿಸಿ, ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ. ಹಂತಹಂತವಾಗಿ ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು 10 ಜನ ಮಹಿಳೆಯರಿಗೆ ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.



## “ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಜಾಗೃತಿ”

04 ಫೆಬ್ರುವರಿ 2026ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ಸಣ್ಣೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ದಾಕ್ಷಾಯಿಣಿ ಇವರು ಮಾಹಿತಿಯನ್ನು ನೀಡಿದರು 0 ಯಿಂದ 6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಿಗೆಯ ಹಂತಗಳು ಯಾವರೀತಿಯಾಗಿ ಕಂಡು ಬರುತ್ತದೆ ಎಂದರೆ 5 ತಿಂಗಳಿಗೆ ಮಗುವಿನ ಕತ್ತು ನಿಲ್ಲಬೇಕು ಒಂಬತ್ತು ತಿಂಗಳಿಗೆ ಮಗುವು ಚೆನ್ನಾಗಿ ಕುಳಿತುಕೋಳಬೇಕು ಒಂದು ವರ್ಷಕ್ಕೆ ಮಗುವು ಮಾತನಾಡಬೆಕು ಮೂರು ವರ್ಷಕ್ಕೆ ಮಗುವು ಎಲ್ಲಾರ ಜೋತೆಗೆ ಸಾಮಾಜಿಕವಾಗಿ ಬೇರೆಯಬೇಕು ಆರು ವರ್ಷಕ್ಕೆ ಮಗುವಿನ ಬೌದ್ಧಿಕ ಸಾಮರ್ಥ್ಯ ಹೊಂದಿರಬೇಕು ಒಂದುವೇಳೆ ಈ ಮೇಲಿನ ಅಂಶಗಳು ಮಗುವಿನಲ್ಲಿ ಕಂಡುಬಾರದೆ ಹೋದರೆ ಮಗುವೂ ಬೆಳವಣಿಗೆಯಲ್ಲಿ ಕುಂಠಿತಗೋಳ್ಳುತ್ತದೆ ಎಂಬುದು ತಿಳಿದುಕೋಳಬೇಕು. ಬೆಳವಣಿಗೆಯಲ್ಲಿ ಮಕ್ಕಳಿಗೆ ಶೀಘ್ರವಾಗಿ ಪತ್ತೆಮಾಡುವ ಮೂಲಕ ಮಕ್ಕಳ ನ್ಯೂನತೆಗೆ ತಕ್ಕಂತೆ ಉತ್ತೇಜಕ ಚಟುವಟಿಕೆಗಳನ್ನು ನೀಡುವ ಕಾರ್ಯ ಸೇವಾ ಸಂಗಮ ಸಂಸ್ಥೆಯ ಮಾಡುತ್ತಿದೆ. ಸರಿಯಾದ ಸಮಯಕ್ಕೆ ಉತ್ತೇಜಕ ಚಟುವಟಿಕೆ ದೊರೆಯದ ಸಂಧರ್ಭದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ವಿಕಲ ಚೇತನರಾಗುವ ಸಂಭವವಿರುತ್ತದೆಂದು ಹೇಳಿದರು. ಈ ಒಂದು ಕಾರ್ಯಕ್ರಮದಲ್ಲಿ 24 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## “ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ”



18 ಫೆಬ್ರುವರಿ 2026ರಂದು ಸೇವಾ ಸಂಗಮ ಸಂಸ್ಥೆಯಲ್ಲಿ ಸಂಘದ ಮಹಿಳೆಯರಿಗೆ ಕ್ಯಾನ್ಸರ್ ಬಗ್ಗೆ ಅರಿವಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಸ್ಪರ್ಶ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಂದಿನಿರವರು ಕ್ಯಾನ್ಸರ್ ಎಂದರೇನು? ಅದರ ಲಕ್ಷಣಗಳು ಕ್ಯಾನ್ಸರ್ ಹೇಗೆ ಬರುತ್ತದೆ. ಕ್ಯಾನ್ಸರ್ ಬಂದರೆ ಸೇವಿಸಬೇಕಾದ ಆಹಾರ ಪದ್ಧತಿಗಳ ಬಗ್ಗೆ ಮತ್ತು ಮಹಿಳೆಯರಿಗೆ ಗರ್ಭಕೋಶ ಕ್ಯಾನ್ಸರ್ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ 23 ಜನ ಮಹಿಳೆಯರು ಮಾಹಿತಿಯನ್ನು ಪಡೆದುಕೊಂಡರು.

## “ವಿಶ್ವ ಕ್ಯಾನ್ಸರ್ ದಿನಾಚರಣೆಯ ಪ್ರಯುಕ್ತ ಸೇಂಟ್ ಮೇರಿ ಶಾಲೆಯಲ್ಲಿ ಲಕ್ಕಿ ಡ್ರಾ ದ್ವಿತೀಯ ಬಹುಮಾನ ವಿತರಣೆ”



23 ಫೆಬ್ರುವರಿ 2026ರಂದು ಸೇವಾ ಸಂಗಮ ಸಂಸ್ಥೆ ವತಿಯಿಂದ ವಿಶ್ವ ಕ್ಯಾನ್ಸರ್ ದಿನಾಚರಣೆಯ ಪ್ರಯುಕ್ತ ಸೇಂಟ್ ಮೇರಿ ಶಾಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ ಲಕ್ಕಿ ಡ್ರಾ ಕೂಪನ್ನಲ್ಲಿ ವಿಜೇತರಾದ ದ್ವಿತೀಯ ಬಹುಮಾನವನ್ನು ಸೇಂಟ್ ಮೇರಿ ಶಾಲೆಯ ವಿದ್ಯಾರ್ಥಿಗೆ ಲಭಿಸಿತ್ತು. ಆ ವಿದ್ಯಾರ್ಥಿಗೆ ಮಿಕ್ಸರ್ ಗ್ರ್ಯಾಂಡ ನೀಡಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಸೇಂಟ್ ಮೇರಿ ಶಾಲೆಯ ಮುಖ್ಯ ಗುರುಗಳಾದ ಫಾದರ್ ಪ್ರವೀಣ್ಜೋಸೆಫ್ಸಿಸ್ವರ್ರೋಜಾನ್, ಸೇವಾ ಸಂಗಮ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವೀರ ಮತ್ತು ಶ್ರೀಮತಿ ನಂದಿನಿ ಹಾಗೂ ಶ್ರೀಮತಿ ಶಿವಕಾಂತ, ಹಾಗೂ ಸೇಂಟ್ ಮೇರಿ ಶಾಲೆಯ ಎಲ್ಲಾ ಶಿಕ್ಷಕ ವೃಂದದವರು ಮಕ್ಕಳು ಸೇರಿ ಒಟ್ಟು 1010 ಜನ ಭಾಗವಹಿಸಿದರು.

## “ಪ್ರೇಮಾಂಜಲಿ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ನಾಯಕತ್ವ ತರಬೇತಿ”



18 ಫೆಬ್ರುವರಿ 2026ರಂದು ಉಜಿನಿಯ ಪ್ರೇಮಾಂಜಲಿ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ನಾಯಕತ್ವ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಉದ್ದೇಶವು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳು, ಆತ್ಮವಿಶ್ವಾಸ ಮತ್ತು ಜವಾಬ್ದಾರಿತನವನ್ನು ಬೆಳೆಸುವುದಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರೆನ್ನಿ ಅವರು ಭಾಗವಹಿಸಿ, ಉತ್ತಮ ನಾಯಕನ ಗುಣಗಳು, ತಂಡದಲ್ಲಿ ಕೆಲಸ ಮಾಡುವ ಮಹತ್ವ, ಸಂವಹನ ಕೌಶಲ್ಯ ಮತ್ತು ಸಮಯ ನಿರ್ವಹಣೆ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳನ್ನು ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿ ಪ್ರಾಯೋಗಿಕವಾಗಿ ತರಬೇತಿ ನೀಡಲಾಯಿತು. ಒಟ್ಟು 40 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.






# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.
ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/– ವರ್ಷಕ್ಕೆ 40,000/–

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in